ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಅಜ್ಜಂಪುರ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ಚಿ.ಸ. ಪ್ರಭುಲಿಂಗ ಶಾಸ್ತ್ರಿ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೬೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**AJJAMPURA:** An Introducing Book on the Places in Karnataka that Played a Major Role in the Freedom Struggle, Written by Chi.Sa. Prabhulinga Shashtri, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಚಿ.ಸ. ಪ್ರಭುಲಿಂಗ ಶಾಸ್ತ್ರಿ

ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001

ಸ್ವಾತಂತ್ರ್ಯದ ಅಮೃತಮಹೋತ್ಸವ



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಚಿಕ್ಕಮಗಳೂರು ಜಿಲ್ಲೆಯ ಬಯಲು ಪ್ರದೇಶವನ್ನೊಳಗೊಂಡ ನೂತನ ತಾಲ್ಲೂಕಾಗಿ ಅಸ್ತಿತ್ವ ಪಡೆದಿರುವ **ಅಜ್ಜಂಪುರದ ಹೋರಾಟದ ಹೆಜ್ಜೆ ಗುರುತು**ಗಳನ್ನು ದಾಖಲಿಸುವ ಪುಸ್ತಕ ಸಿದ್ಧಪಡಿಸುವ ಪುಣ್ಯದ ಕೆಲಸವನ್ನು ನನ್ನ ಮೇಲೆ ಭರವಸೆಯಿಟ್ಟು ವಹಿಸಿರುವ ನನ್ನ ಸನ್ಮಿತ್ರರೂ ಆದ ಡಾ.ಬಿ.ವಿ.ವಸಂತಕುಮಾರ್, ರಿಜಿಸ್ಟ್ರಾರ್ ಎನ್.ಕರಿಯಪ್ಪ ಹಾಗೂ ಕೋಡಿಬೆಟ್ಟು ರಾಜಲಕ್ಷ್ಮಿ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ದೇಶದೆಲ್ಲೆಡೆ ಸ್ವರಾಜ್ಯದ ಧ್ವನಿ ಮೊಳಗಿದಾಗ ಸಹಜವಾಗಿಯೇ ಇಲ್ಲೂ ಹೋರಾಟಗಳು ನಡೆದಿವೆ. ಹಲವರು ವಿದ್ಯಾಭ್ಯಾಸ ನಿಲ್ಲಿಸಿದರೆ, ಕೆಲವರು ಇದ್ದ ಉದ್ಯೋಗ ತ್ಯಜಿಸಿದ್ದಾರೆ. ಸ್ಥಾನಮಾನಗಳಿಗೆ ರಾಜೀನಾಮೆ ನೀಡಿ ಹೋರಾಟದಲ್ಲಿ ಪಾಲ್ಗೊಂಡವರು ಇದ್ದಾರೆ. ಮನೆ ಮಠ ಕಳೆದುಕೊಂಡು ಬೀದಿಪಾಲಾದ ಕುಟುಂಬಗಳು ಹಲವು ಇವೆ.

'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಹೋರಾಟ ಇಲ್ಲಿ ಪ್ರಬಲವಾಗಿತ್ತು. ಮೈಸೂರು ಪ್ರದೇಶ ಕಾಂಗ್ರೆಸ್ ಅಧಿವೇಶನ ಇಲ್ಲಿ ಆಯೋಜನೆಗೊಂಡು ಬ್ರಿಟಿಷರ ಕೆಂಗಣ್ಣಿನಿಂದ ನಿಷೇಧಾಜ್ಞೆ ಬಂದರೂ ಜಗ್ಗದ ಜನತೆ ದೂರದ ಹೊಲದಲ್ಲಿ 'ವಿಜಯ ಮೈದಾನ' ನಿರ್ಮಿಸಿ ಅದ್ದೂರಿ ಮೆರವಣಿಗೆಯೊಂದಿಗೆ ಅಧಿವೇಶನ ನಡೆಸಿದ್ದು ಚರಿತ್ರಾರ್ಹ ಸಂಗತಿ. ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಯಲ್ಲೇ ಸ್ವಾಭಿಮಾನ ಸ್ವಾವಲಂಬನೆಯ ಚಳುವಳಿಯೂ ಇಲ್ಲಿ ನಡೆದಿದೆ. ರಾಜ್ಯದಲ್ಲೇ ಎರಡು ಕಡೆ ಆರಂಭಗೊಂಡ ಖಾದಿಕೇಂದ್ರ ಇಲ್ಲಿತ್ತು.

ಅಜ್ಜಂಪುರದ ಪ್ರಾತಃಸ್ಮರಣೀಯರಲ್ಲೊಬ್ಬರಾದ **ಎಸ್. ಸುಬ್ರಹ್ಮಣ್ಯ ಶೆಟ್ಟರ** ಧೀಮಂತ ನೇತೃತ್ವ ದಾಖಲಾರ್ಹ. ಮಾದರಿಯಾಗಿ ಊರು ಕಟ್ಟುವ

ಮುಂದಾಲೋಚನೆ, ಸಾಮರಸ್ಯ ಸದ್ಭಾವನೆ ಬಿತ್ತುವಲ್ಲಿ ಅವರ ಪ್ರಯತ್ನ ಮಾದರಿಯಾದದ್ದು. ಅವರ ಕಾರ್ಯಬಾಹುಳ್ಯದ ಅಗಾಧತೆಯನ್ನು ಅರಿಯಲು ಪ್ರಮುಖವಾಗಿ ನೆರವಾದವರು ಪತ್ರಕರ್ತೆ ಬೆಂಗಳೂರಿನಲ್ಲಿ ನೆಲೆಸಿರುವ ಅವರ ಸೊಸೆ ಶಶಿಕಲಾ. ತಮ್ಮ ಕುಟುಂಬದ ಹಿರಿಯರ ಬಗ್ಗೆ ಅಪಾರ ಅಕ್ಕರೆ, ಆಸಕ್ತಿ, ಅಭಿಮಾನ ಹೊಂದಿರುವ ಶಶಿಕಲಾ ಕೆಲ ಚಿತ್ರಗಳ ಸಂಗ್ರಹಕ್ಕೂ ನೆರವಾಗಿದ್ದಾರೆ.

ಮಹಾತ್ಮ ಗಾಂಧೀಜಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಮೇಲೆ ಇಲ್ಲಿ ಹೋರಾಟದ ಕಾವು ಪಡೆದಿದ್ದು ಸುಳ್ಳಲ್ಲ. ಆದರೆ ಅದಕ್ಕೂ ಮೊದಲು ಸಹ ಇಲ್ಲಿ ಚಳುವಳಿ ನಡೆದ ಹೆಜ್ಜೆ ಗುರುತುಗಳಿವೆ. ಅಹಿಂಸಾವಾದವಷ್ಟೇ ಅಲ್ಲ ಸ್ವಾತಂತ್ರ್ಯ ಗಳಿಕೆಗೆ ಶಸ್ತ್ರ ಹಿಡಿಯಬೇಕೆಂದು ಹಂಬಲಿಸಿದವರೂ ಇಲ್ಲಿದ್ದರು. ಅಖಂಡ ಭಾರತ ಕಲ್ಪನೆಗೆ ಬೆಂಬಲ ವ್ಯಾಪಕವಾಗಿತ್ತು. ಅದಕ್ಕಾಗಿಯೇ ಸ್ವಾತಂತ್ರ್ಯ ಬಂದ ನಂತರವೂ ಮೈಸೂರು ಚಲೋದಲ್ಲಿ ದೊಡ್ಡ ಪ್ರಮಾಣದಲ್ಲಿ ಪಾಲ್ಗೊಂಡ ಪಡೆ ಈ ಊರಿನಲ್ಲಿತ್ತು. ದಾಖಲಾತಿಯ ಕೊರತೆಯಿಂದಾಗಿ ನಮ್ಮಲ್ಲಿ ನಡೆದ ಹೋರಾಟದ ವಿವರಗಳು ಪ್ರಚುರಗೊಂಡಿಲ್ಲ.

ಸರಿಸುಮಾರು ಶತಮಾನಗಳ ಹಿಂದಿನ ಸಂಗತಿಗಳನ್ನು ಸಂಗ್ರಹಿಸಲು ಹಲವರ ನೆರವು ಸ್ಮರಣೀಯ. ನನ್ನ ಆತ್ಮೀಯರಾದ ಅಜ್ಜಂಪುರ ಮಂಜುನಾಥ್, ಅಪೂರ್ವ, ಸಂಪತ್‌ಕುಮಾರ್, ಸೂರಿ ಶ್ರೀನಿವಾಸ, ಅನಂತಯ್ಯ ನಾಡಿಗ್, ಬಗ್ಗವಳ್ಳಿ ಗಂಗಾಧರಯ್ಯ, ಬಿ.ಪಿ.ಶಿವಮೂರ್ತಿ, ಕಾಟಿನೆರೆ ಉಮಾಪತಿ ಆರಾಧ್ಯ, ಅನೂಪ್, ಬಿ.ಚಂದ್ರೇಗೌಡ ಮತ್ತಿತರರ ಸಹಕಾರ ಮರೆಯಲಾಗದು. ವಿಷಯ ಸಂಗ್ರಹ, ಜೋಡಣೆ, ದಾಖಲಾತಿ, ಬೆರಳಚ್ಚು, ಕರಡು ತಿದ್ದುವುದು, ಕಾನೂನು ಸಲಹೆ ಸೇರಿದಂತೆ ಎಲ್ಲ ಹಂತದಲ್ಲೂ ನೆರವು ನೀಡಿದ ಮಾಧ್ಯಮ ಸಂಸ್ಕೃತಿ ಪ್ರತಿಷ್ಠಾನದ ಕಾರ್ಯದರ್ಶಿಯೂ ಆದ ನನ್ನ ಧರ್ಮಪತ್ನಿ ಎಂ.ಆರ್.ಸುಮಿತ್ರಾಶಾಸ್ತ್ರಿ ಪರಿಶ್ರಮ ಸ್ಮರಣೀಯ.

**ಚಿ.ಸ. ಪ್ರಭುಲಿಂಗಶಾಸ್ತ್ರಿ**
ಪ್ರಧಾನ ಸಂಪಾದಕ: ಪ್ರಭುನ್ಯೂಸ್‌ಬ್ಯುರೋ
ಸುವರ್ಣ ಮಾಧ್ಯಮ ಭವನ, ವಿಜಯಪುರ
ಚಿಕ್ಕಮಗಳೂರು–೫೭೭ ೧೦೧
ದಿನಾಂಕ: ೨೬–೧೨–೨೦೨೧

## ಪರಿವಿಡಿ

ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಅಜ್ಜಂಪುರ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗಳು ೧೫
ಚಿಕ್ಕಮಗಳೂರು ಜಿಲ್ಲೆಯಲ್ಲಿ ತಾಮ್ರಪತ್ರ ಪಡೆದ ಸ್ವಾತಂತ್ರ್ಯ ಹೋರಾಟಗಾರರು ೫೦
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೫೧

# ಅಜ್ಜಂಪುರ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗಳು

ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದ ಭೂಪಟದಲ್ಲಿ ಅಜ್ಜಂಪುರಕ್ಕೆ ಮಹತ್ವವಿದೆ. ಪುಟ್ಟ ತಾಲ್ಲೂಕಿನಲ್ಲಿ ಹಲವು ದಶಕಗಳ ಕಾಲ ನಡೆದ ಸ್ವಾತಂತ್ರ್ಯ ಸಮರದ ದಿಟ್ಟ ಹೋರಾಟವನ್ನು ದಾಖಲಿಸುವ ಹಂಬಲವೇ ಈ ಹೊತ್ತಿಗೆ.

ಸ್ವಾತಂತ್ರ್ಯ ಸಂಗ್ರಾಮದ ಜೊತೆ ಜೊತೆಯಲ್ಲೇ ಆಧ್ಯಾತ್ಮಿಕತೆ, ಖಾದಿ ಮತ್ತು ಗ್ರಾಮೋದ್ಯೋಗ, ಸ್ವಾವಲಂಬನೆ ಹಾಗೂ ಸಾಮರಸ್ಯದ ಹೋರಾಟಗಳೂ ೧೯ನೆಯ ಶತಮಾನದದ ಪೂರ್ವಾರ್ಧದಲ್ಲಿ ನಡೆದಿರುವುದು ಅಜ್ಜಂಪುರದ ವೈಶಿಷ್ಟ್ಯವೆನ್ನಬಹುದು. ಗಾಂಧಿಯುಗಕ್ಕಿಂತ ಮುನ್ನ, ಪ್ರಥಮ ಸ್ವಾತಂತ್ರ್ಯ ಸಮರದ ಮುನ್ನವೇ ಈ ಭಾಗದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದಿದೆ. ಆದರೆ ಅದನ್ನು ಬ್ರಿಟಿಷರು ದಂಗೆ, ಅಡಾವುಡಿ ಎಂಬ ಹೆಸರಿನಲ್ಲಿ ಹತ್ತಿಕ್ಕಿದ್ದರು.

ತರೀಕೆರೆಯನ್ನು ಕೇಂದ್ರವಾಗಿಸಿಕೊಂಡ ಸಂತೇಬೆನ್ನೂರು ನಾಯಕರು ಈ ಪ್ರದೇಶದಲ್ಲಿ ೩೫೦ ವರ್ಷಕ್ಕೂ ಹೆಚ್ಚು ಕಾಲ ರಾಜ್ಯಭಾರ ಮಾಡಿದ್ದರೆಂಬ ಐತಿಹ್ಯವಿದೆ. ಹಿರೇಕೆಂಗಾ ಹನುಮಪ್ಪ ನಾಯಕನ ಕಾಲದಲ್ಲಿ ವಿಜಾಪುರ ಸುಲ್ತಾನನ ಕಡೆಯವರು ಸಂತೇಬೆನ್ನೂರನ್ನು ಗೆದ್ದು ಅಲ್ಲಿ ಆಳುತ್ತಿದ್ದ ಕೆಂಗಾಹನುಮಪ್ಪ ನಾಯಕನನ್ನು ಬಂಧಿಸಿ ಕರೆದೊಯ್ಯುತ್ತಾರೆ. ಅಲ್ಲಿ ಸುಲ್ತಾನನ ಎದುರು ನಡೆಯುತ್ತಿದ್ದ ಹುಲಿ ಕಾಳಗದಲ್ಲಿ ಭಾಗವಹಿಸಿ ಹುಲಿಯನ್ನು ಕೊಂದ ಸಾಹಸಕ್ಕಾಗಿ 'ಸರ್ಜಾ' ಬಿರುದು ಪಡೆದ ಹನುಮಪ್ಪ ನಾಯಕ ಸಂತೇಬೆನ್ನೂರನ್ನು ಹಿಂಪಡೆಯುತ್ತಾನೆ. ನಾಲ್ಕೇ ವರ್ಷದ ತರುವಾಯ ಅದೇ ಬಿಜಾಪುರದ ಸೇನಾಪತಿ ಸಂತೇಬೆನ್ನೂರನ್ನು ಮುತ್ತಿ ವಶಪಡಿಸಿಕೊಂಡ ಮೇಲೆ ಚಿಕ್ಕಕೆಂಗಾ

ನಾಯಕ ತರೀಕೆರೆಗೆ ಬಂದು ನೆಲೆಸುತ್ತಾನೆ. ಸರ್ಜಾ ಹನುಮಪ್ಪ ನಾಯಕನವರೆಗೂ ೧೨ ಜನ ಪಾಳೇಗಾರರು ತರೀಕೆರೆ ಪ್ರಾಂತ್ಯವನ್ನು ಆಳಿದ್ದರು.

೧೭೮೦ರಲ್ಲಿ ಅಧಿಕಾರಕ್ಕೆ ಬಂದ ಎರಡನೇ ಸರ್ಜಾ ಹನುಮಪ್ಪ ನಾಯಕನನ್ನು ಹೈದರಾಲಿ ಪರಾಭವಗೊಳಿಸುತ್ತಾನೆ. ಕಪ್ಪವಾಗಿ ೧೮,೦೦೦ ವರಹಗಳ ಪೊಗದಿಯನ್ನು ಕೇಳುತ್ತಾನೆ. ಅಷ್ಟೊಂದು ವರಹಗಳನ್ನು ನಾಯಕರು ಕೊಡಲು ಸಾಧ್ಯ ಆಗುವುದಿಲ್ಲ. ಆಗ ತರೀಕೆರೆಯ ಆಡಳಿತವನ್ನು ತಪ್ಪಿಸಿ ೧,೭೮೦ ವರಹ ಪೊಗದಿಯ ಮುಂಜರಾಬಾದ್ ಪ್ರಾಂತ್ಯವನ್ನು ಹನುಮಪ್ಪ ನಾಯಕನಿಗೆ ವಹಿಸುತ್ತಾರೆ. ತರೀಕೆರೆಯಲ್ಲಿದ್ದುಕೊಂಡೇ ಈಗಿನ ಸಕಲೇಶಪುರದ ಭಾಗವನ್ನು ಆಳುತ್ತಾನೆ. ಆ ನಂತರ ಕೃಷ್ಣಪ್ಪ ನಾಯಕ, ಸರ್ಜಾ ರಂಗಪ್ಪ ನಾಯಕ, ಸರ್ಜಾ ಹನುಮಪ್ಪ ನಾಯಕರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರು.

ಇವನ ಮೊಮ್ಮಗನೇ ಮೈಸೂರು ಇತಿಹಾಸದಲ್ಲಿ ಹೆಸರು ಪಡೆದ ರಂಗಪ್ಪನಾಯಕ. ಈತ ಮೈಸೂರಿನ ೩ನೆಯ ಮತ್ತು ೪ನೆಯ ಯುದ್ಧಗಳಲ್ಲಿ ಭಾಗವಹಿಸಿದ್ದ. ಟಿಪ್ಪುಸುಲ್ತಾನ ಮಡಿದು, ಮುಮ್ಮಡಿ ಕೃಷ್ಣರಾಜ ಒಡೆಯರ್ ದೊರೆಯಾದ ಸಂದರ್ಭದಲ್ಲಿ ಮೈಸೂರು ರಾಜ್ಯವನ್ನು ಬ್ರಿಟಿಷರು ಹಂತ ಹಂತವಾಗಿ ಹಿಡಿತಕ್ಕೆ ಪಡೆಯಲು ಹವಣಿಸಿದರು. ಇದು ಕೆಲವು ಸ್ವಾಮಿನಿಷ್ಠ ಪಾಳೇಗಾರರಿಗೆ ಇಷ್ಟವಾಗಲಿಲ್ಲ. ಅತೃಪ್ತ ಜನತೆಯ ಗುಂಪುಕಟ್ಟಿ ರಂಗಪ್ಪನಾಯಕ ಸೆಟೆದು ನಿಂತ. ಶ್ರೀರಂಗಪಟ್ಟಣದಲ್ಲಿ ಬ್ರಿಟಿಷರ ದಂಡು ಬೀಡುಬಿಟ್ಟಿದ್ದನ್ನು ರಂಗಪ್ಪನಾಯಕ ಮತ್ತು ಅವನ ಪುತ್ರ ಸರ್ಜಾ ಹನುಮಪ್ಪನಾಯಕ ಸೇರಿ ತೀವ್ರವಾಗಿ ವಿರೋಧಿಸುತ್ತಾರೆ. ದೇಶದಲ್ಲಿ ತಲೆದೋರಿದ್ದ ಬ್ರಿಟಿಷ್ ಆಡಳಿತ ವ್ಯವಸ್ಥೆಯ ವಿರುದ್ಧ ಹಾಗೂ ಅಧಿಕಾರಿಗಳ ನಿರಂಕುಶ ದಬ್ಬಾಳಿಕೆ – ಶೋಷಣೆಗಳಿಂದ ಕೆರಳಿ ಸಾಮೂಹಿಕವಾಗಿ ಜನ ದಂಗೆ ಎದ್ದರು. ಮೈಸೂರು ಸೈನ್ಯದಲ್ಲಿದ್ದ ಸುಮಾರು ೧೫೦೦ ಮಂದಿ ಬೇಡ–ಕಂದಾಚಾರದ ಸಿಪಾಯಿಗಳು ಇವರ ಕಡೆ ಸೇರಿದರು. ಈ ಹೋರಾಟ 'ರಂಗನಾಯಕನ ಅಡಾವುಡಿ' ಎಂದು ಹೆಸರಾಗುತ್ತದೆ. ಬ್ರಿಟಿಷರು ತಮ್ಮೆಲ್ಲ ಶಕ್ತಿ ಪ್ರಯೋಗಿಸಿ ದಂಗೆ ಅಡಗಿಸಿ ರಂಗಪ್ಪನಾಯಕನನ್ನು ಕೊಲ್ಲುತ್ತಾರೆ.

ಸರ್ಜಾ ಹನುಮಪ್ಪನಾಯಕನ ಹೋರಾಟ ಜನಮನದಲ್ಲಿ ಅಚ್ಚಳಿಯದ



ಪ್ರಭಾವ ಬೀರಿದೆ. ಜನಪದ ಸಾಹಿತ್ಯದಲ್ಲಿ ಆತ ವೀರ, ಧೀರ, ಛಲಗಾರ, ಗಂಭೀರ, ಆಂಜನೇಯನ ಪರಮಭಕ್ತ, ಬಡವರ ಬಂಧು ಎಂದು ಗುರುತಿಸಿಕೊಂಡಿದ್ದ. ಜನತೆಯ ಅಚ್ಚುಮೆಚ್ಚಿನ ಜನನಾಯಕ ಸರ್ಜಾ ಹನುಮನಾಯಕರ ಸುತ್ತ ದೊಡ್ಡ ಯುವಕರ ಪಡೆಯೇ ಇತ್ತು. ಕಲ್‌ದುರ್ಗ, ಕಾಮನದುರ್ಗಗಳ ಆಚೀಚೆ ಬಂಡಾಯ ನಿರ್ದೇಶಿಸಿ ಬ್ರಿಟಿಷರಿಗೆ ತಲೆನೋವಾಗಿದ್ದ ಸರ್ಜಾ ಹನುಮಪ್ಪ ನಾಯಕನನ್ನು ಆತನ ಪ್ರೇಯಸಿ ರಂಗಮ್ಮನ ಮುಖಾಂತರ ಮೋಸದಿಂದ ಸೆರೆಹಿಡಿಸಿ, ಬೆಂಗಳೂರಿನ ದಂಡು ಪ್ರದೇಶದಲ್ಲಿ ಸಾರ್ವಜನಿಕವಾಗಿ ಗಲ್ಲಿಗೇರಿಸಲಾಯಿತು. ಈ ಮೂಲಕ ಹೋರಾಟಗಾರರಿಗೆ ಬೆದರಿಕೆಯ ಸಂದೇಶವನ್ನು ಬ್ರಿಟಿಷರು ಈ ಭಾಗದಲ್ಲಿ ರವಾನಿಸುತ್ತಾರೆ.

ಮರಾಠಿ ವೀರ ದೋಂಡಿಯುವಾಘ್ ಇದೇ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ಕಾರಾಗೃಹದಿಂದ ತಪ್ಪಿಸಿಕೊಂಡು ಅಜ್ಜಂಪುರದ ಭಾಗದಲ್ಲಿ ಸಂಚರಿಸಿದ ಕುರುಹುಗಳಿವೆ. ಇಲ್ಲಿಯ ಗರಡಿಮನೆಗಳ ಯುವಕರನ್ನು ಸಂಪರ್ಕಿಸಿ ಸ್ವಾತಂತ್ರ್ಯದ ಕಿಚ್ಚುಹತ್ತಿಸಿ ಹೊಸ ಸೇನೆ ಕಟ್ಟುತ್ತಾನೆ. ಅವರೆಲ್ಲರೂ ಇಲ್ಲಿಂದ ಮುಂದೆ ಸಾಗಿ ಶಿಕಾರಿಪುರ ಕೋಟೆಯನ್ನು ವಶಪಡಿಸಿಕೊಂಡರು. ಸ್ವಾಭಿಮಾನಿ ದೋಂಡಿಯಾಗೆ ಅಜ್ಜಂಪುರ ಸೇರಿದಂತೆ ತರೀಕೆರೆ, ಬೀರೂರು ಸುತ್ತಮುತ್ತಲಿನ ಯುವಕರು ಸಾಥ್ ನೀಡಿದ ಸಾಹಸದ ಇತಿಹಾಸ ಈ ಮಣ್ಣಿಗಿದೆ. ಇದೇ ನೆನಪಿಗಾಗಿ ಕುಸ್ತಿ ಪಟುಗಳಿಂದ ಜಂಘಿ ಕುಸ್ತಿಯನ್ನು ಜಾತ್ರೆಯ ಸಂದರ್ಭದಲ್ಲಿ ಆಯೋಜಿಸುವ ಪರಿಪಾಠ ಮುಂದುವರೆದಿದೆ.

## ಅಜ್ಜಂಪುರದ ಭೌಗೋಳಿಕತೆಯ ಕಿರುಪರಿಚಯ

ಚಿಕ್ಕಮಗಳೂರು ಜಿಲ್ಲೆಯ ಮೈದಾನ ಪ್ರದೇಶ ಅಥವಾ ಸಂಪೂರ್ಣ ಎರೆಸೀಮೆ ಪ್ರದೇಶಗಳಾದ ತರೀಕೆರೆ ಅವಿಭಜಿತ ತಾಲ್ಲೂಕಿನ ಅಜ್ಜಂಪುರ ಮತ್ತು ಶಿವನಿ ಪೂರ್ಣ ಹೋಬಳಿಗಳು, ಅಮೃತಾಪುರದ ಕೆಲವು ಗ್ರಾಮಗಳು, ಜೊತೆಗೆ ಕಡೂರು ತಾಲ್ಲೂಕಿನ ಚೌಳಹಿರಿಯೂರು, ಹಿರೇನಲ್ಲೂರು, ಯಗಟಿ ಹೋಬಳಿಗಳ ಹಲವು ಗ್ರಾಮಗಳನ್ನು ಒಳಗೊಂಡಂತೆ ೨೦೧೭ರಲ್ಲಿ ಅಜ್ಜಂಪುರವನ್ನು ಕೇಂದ್ರವಾಗಿಸಿ ನೂತನ ತಾಲ್ಲೂಕನ್ನು ಆಡಳಿತಾತ್ಮಕ ಅನುಕೂಲಕ್ಕಾಗಿ ರಚಿಸಲಾಯಿತು. ಕಡೂರು ತಾಲ್ಲೂಕಿನ ವ್ಯಾಪ್ತಿಗೆ ಬರುತ್ತಿದ್ದ ಪ್ರದೇಶವು ರಾಜಕೀಯ ಕಾರಣಗಳಿಗಾಗಿ ಕಳಚಿಕೊಂಡ ಮೇಲೆ ಅಜ್ಜಂಪುರ

ಮತ್ತು ಶಿವನಿ ಹೋಬಳಿ ಜೊತೆಗೆ ಕೆಲ ಗ್ರಾಮಗಳಷ್ಟೇ ಉಳಿದಕೊಂಡ ಅಜ್ಜಂಪುರ ತಾಲ್ಲೂಕು ಈಗ ಅಸ್ತಿತ್ವ ಪಡೆದುಕೊಂಡಿದೆ.

ಅಜ್ಜಂಪುರ ತಾಲ್ಲೂಕಿನಲ್ಲಿ ಕರ್ಲಳ್ಳ ಹೊರತುಪಡಿಸಿದರೆ ದೊಡ್ಡ ನದಿಗಳಿಲ್ಲ. ಭದ್ರಾ ಕಾಲುವೆ ಆಳದಲ್ಲಿ ಹಾದುಹೋಗಿದೆ. ಇದು ಸಾಂಬಾರ ಬೆಳೆಗೆ ಪ್ರಸಿದ್ಧ ಪ್ರದೇಶ. ಇಲ್ಲಿ ಬೆಳೆಯುತ್ತಿದ್ದ ಧನಿಯಾ ಬಹು ಪ್ರಸಿದ್ಧಿ. ಒಣ ಮೆಣಸಿಕಾಯಿ, ಈರುಳ್ಳಿ, ಎಳ್ಳು, ಜೋಳ, ರಾಗಿ ಪ್ರಮುಖ ಬೆಳೆಯಾಗಿದ್ದವು. ಭದ್ರಾ ಅಣೆಕಟ್ಟೆ ನಿರ್ಮಾಣಗೊಂಡ ನಂತರ ಹಿನ್ನೀರಿನ ಮೇಲಿನಿಂದ ಬೀಸುವ ತಂಗಾಳಿಗೆ ಧನಿಯಾ ಬಲಿಯಾಗಿದೆ. ಜಿಡ್ಡು ಹುಳದ ಬಾಧೆಗೆ ಮೆಣಸಿನಕಾಯಿ ಬಿಳಿಗಾಯಿ ಆಗಿದೆ. ಇಬ್ಬನಿಯಲ್ಲೇ ಬೆಳೆಯುವ ಬಿಳಿಜೋಳ ಮತ್ತು ಕಡ್ಲೆಕಾಳು ಪ್ರಸ್ತುತ ರೈತರ ಆಧಾರ. ತಗ್ಗು ಪ್ರದೇಶದಲ್ಲಿ ಅಡಿಕೆ–ತೆಂಗಿನ ತೋಟಗಳೂ ಇವೆ.

'ನಾಡಿಗೆ ಬರ ಬಂದರೂ ಶಿವನಿ ಸೀಮೆಗೆ ಬರ ಬರುವುದಿಲ್ಲ' ಎಂಬ ನಾಣ್ಣುಡಿ ಇಲ್ಲಿ ಈಗಲೂ ಪ್ರಸ್ತುತವೆನಿಸಿದೆ. ಸ್ವಲ್ಪ ಮಳೆಯಾದರೂ ಸಾಕು ವರ್ಷವಿಡಿ ಭೂಮಿ ತನುವಾಗಿರುತ್ತದೆ. ಶ್ರೀ ಶಿವಾನಂದಾಶ್ರಮ, ಶ್ರೀ ಹಣ್ಣೆಮಠ, ಹುಣಸಘಟ್ಟದ ಶ್ರೀ ಹಾಲುಸ್ವಾಮಿಮಠ ಹಾಗೂ ನಂದಿಪುರದ ಉಜ್ಜೈನಿ ಮರುಳುಸಿದ್ದೇಶ್ವರ ಶಾಖಾಮಠ ಹಾಗೂ ಬುಕ್ಕಾಂಬುಧಿಯ ತಪೋ ಕ್ಷೇತ್ರಗಳು, ಸೊಲ್ಲಾಪುರ ಸಿದ್ಧರಾಮ ಶರಣರ ತೋರುಗದ್ದುಗೆ ಶತಮಾನಗಳಿಂದಲೂ ಜನರಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಸ್ಕಾರ ನೀಡಿಕೊಂಡು ಬಂದ ಹೆಗ್ಗಳಿಕೆಗೆ ಪಾತ್ರವಾಗಿದೆ. ಪಕ್ಕದ ಸಾಣೆಹಳ್ಳಿ ಮಠದ ಪ್ರಭಾವವು ಅಜ್ಜಂಪುರದ ಮೇಲೆ ದಟ್ಟವಾಗಿದೆ. ಅಂತರಘಟ್ಟಮ್ಮನ ಜಾತ್ರೆ ಮತ್ತು ಕಿರಾಳಮ್ಮನ ಜಾತ್ರೆ ಲೋಕ ಪ್ರಸಿದ್ಧ.

ಇಲ್ಲಿಯ ಹಣ್ಣೆಯ ಗುಡ್ಡದಲ್ಲಿ ಚಿನ್ನದ ನಿಕ್ಷೇಪವಿದೆ. ಶತಮಾನಗಳ ಹಿಂದೆ ಅದಿರನ್ನು ಸಂಸ್ಕರಿಸಿ ಚಿನ್ನ ತೆಗೆಯುತ್ತಿದ್ದ ಕುರುಹುಗಳಿವೆ. ಜಾನಪದ ಸಂಪತ್ತು ಯಥೇಚ್ಛವಾಗಿದೆ. ದೇವರನ್ನು ನಿಂದಿಸುತ್ತಾ ಸ್ತುತಿಸುವ ಆಸಾದಿ ಪದಗಳನ್ನು ಇಲ್ಲಷ್ಟೇ ಹೆಚ್ಚಾಗಿ ಕೇಳಬಹುದು. ನಾಡಿನ ಜಾನಪದ ಕೋಗಿಲೆ ಕೆ.ಆರ್.ಲಿಂಗಪ್ಪ, ಜಾನಪದ ತಜ್ಞ ಗೊ.ರು.ಚನ್ನಬಸಪ್ಪ, ಖ್ಯಾತ ರಂಗಕರ್ಮಿ ಡಾ.ಮರುಳಸಿದ್ದಪ್ಪ, ಸರ್ಕಸ್ ಸುಬ್ಬರಾವ್ ಮತ್ತಿತರ ಸಾಧಕರನ್ನು ನಾಡಿಗೆ ಕೊಟ್ಟ ತಾಲ್ಲೂಕಿದು.



ಆಸಂದಿಸೀಮೆ ಎಂದು ಹಿಂದೆಯೇ ಪ್ರಖ್ಯಾತಿ ಹೊಂದಿದ ಪ್ರದೇಶವಿದು. ಕ್ರಿ.ಶ.೫ನೆಯ ಶತಮಾನದಲ್ಲಿ ಸೇಂದ್ರಕರು ಆಳುತ್ತಿದ್ದರು. ತಲಕಾಡಿನ ಗಂಗರು, ನೊಣಂಬರು, ಹೊಯ್ಸಳರು ಆಳ್ವಿಕೆ ನಡೆಸಿದ ಇತಿಹಾಸವಿದೆ. ಮೊಘಲ ಸೇನಾನಿಯಾಗಿದ್ದ ಅಜ್ಜೀಮ್‌ಖಾನ್ ಈ ಸ್ಥಳದಲ್ಲಿ ಬೀಡುಬಿಟ್ಟು ಸಂದರ್ಭದಲ್ಲಿ ಮೊಲವೊಂದು ಬೇಟೆನಾಯಿಯನ್ನು ಅಟ್ಟಿಸಿಕೊಂಡು ಹೋದದ್ದನ್ನು ವೀಕ್ಷಿಸಿದನಂತೆ. ವೀರಭೂಮಿ ಇದೆಂದು ಅರಿತು ಇಲ್ಲೇ ನೆಲೆ ಕಂಡ. ಕೋಟೆಯನ್ನು ಕಟ್ಟಿಸಿಕೊಂಡು ಆಡಳಿತವನ್ನು ನಡೆಸಿದ. ಅಜ್ಜೀಮ್‌ಖಾನ್ ಹೆಸರು ರೂಪಾಂತರಗೊಂಡು ಅಜ್ಜಂಪುರ ಎಂಬ ಹೆಸರು ಪಡೆಯಿತೆಂಬುದು ಆಡುಮಾತು.

ಪಕ್ಕದ ಬಗ್ಗವಳ್ಳಿಯಲ್ಲಿ ಪುರಾತನ ಶಿಲ್ಪವೈಭವದ ಚನ್ನಕೇಶವ–ಯೋಗನರಸಿಂಹ ದೇವಾಲಯವಿದೆ. ಭಾರ್ಗವಮುನಿ (ಪರಶುರಾಮ)ಯ ಆಶ್ರಮವಿತ್ತೆಂಬ ಪ್ರತೀತಿ ಇದೆ. ಅಜ್ಜಂಪುರದ ಅಮೃತಮಹಲ್ ಗೋತಳಿ ದೇಶ ವಿಖ್ಯಾತಿ. ನಾಲ್ಕೈದು ಜಿಲ್ಲೆಗಳನ್ನು ವ್ಯಾಪಿಸಿರುವ ಅಮೃತಮಹಲ್ ಕಾವಲು ಮೈಸೂರು ಮಹಾರಾಜರ ಕಾಲದಲ್ಲೇ ಅಸ್ತಿತ್ವದಲ್ಲಿತ್ತು.

ಚಿಕ್ಕಮಗಳೂರು ಜಿಲ್ಲೆಯ ಅಂಚಿನ ಅಜ್ಜಂಪುರ ನೂತನ ತಾಲ್ಲೂಕು ಚನ್ನಗಿರಿ, ಹೊಸದುರ್ಗ, ಭದ್ರಾವತಿ, ಕಡೂರು ಮತ್ತು ತರೀಕೆರೆ ತಾಲ್ಲೂಕುಗಳನ್ನು ಅಂಟಿಸಿಕೊಂಡಿದೆ. ಹತ್ತಾರು ಗ್ರಾಮಗಳ ಕೇಂದ್ರ ಸ್ಥಳವಾದ್ದರಿಂದ ಆದಿಯಿಂದಲೂ ಪ್ರಮುಖವಾದ ವಾಣಿಜ್ಯ ತಾಣವಿದು. ಸ್ವಾತಂತ್ರ್ಯ ಪೂರ್ವದಿಂದಲೂ ಉತ್ತಮ ರಸ್ತೆ ಸಂಪರ್ಕದ ಜೊತೆಗೆ ರೈಲು ನಿಲ್ದಾಣವನ್ನು ಹೊಂದಿರುವುದರಿಂದ ಉತ್ತರದ ಭಾಗಕ್ಕೆ ಹೆಚ್ಚು ಸನಿಹ. ದೇಶದ ಆಗುಹೋಗುಗಳು ಇಲ್ಲಿಗೆ ಬಹುಬೇಗ ತಲುಪುತ್ತಿದ್ದವು. ಈ ಭಾಗದಲ್ಲಿ ರೈತಾಪಿ ವರ್ಗಕ್ಕೆ ಸಾರ್ವಜನಿಕ ಆಗುಹೋಗುಗಳ ಕುರಿತು ಆಸಕ್ತಿಯೂ ಅಧಿಕ.

## ಸ್ವಾತಂತ್ರ್ಯ ಹೋರಾಟದ ಕಿಡಿ

ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಭಾರತೀಯರಲ್ಲಿ ಬ್ರಿಟಿಷರ ವಿರುದ್ಧ ಅಸಹನೆಯನ್ನು ಜಗಜ್ಜಾಹೀರುಗೊಳಿಸುತ್ತದೆ. ದಾಸ್ಯದ ಸಂಕೋಲೆಯಿಂದ ಭಾರತವನ್ನು ಮುಕ್ತಗೊಳಿಸಲು ಹಲವರು ಸಂಕಲ್ಪ ಮಾಡುತ್ತಾರೆ. ಕೆಲವರು ಉಗ್ರವಾದ ದಾರಿಯನ್ನು ಆಯ್ದುಕೊಳ್ಳಬೇಕು ಎಂಬ ವಾದವನ್ನು ಮುಂದಿಟ್ಟರೆ

ಕೆಲವರು ಸೌಮ್ಯವಾದ ತಳೆಯುವುದೇ ಉತ್ತಮವೆಂದು ಭಾವಿಸುತ್ತಾರೆ. ತೀವ್ರವಾದದ ಪ್ರತಿಪಾದಕರಾದ ಬಾಲಗಂಗಾಧರನಾಥ ತಿಲಕ್ ತೀರಿಕೊಂಡ ನಂತರ ಮಹಾತ್ಮ ಗಾಂಧೀ ಅವರ ಸೌಮ್ಯವಾದ ಹೆಚ್ಚು ಪ್ರಚುರಗೊಂಡ ೧೯ನೆಯ ಶತಮಾನದ ಆದಿಭಾಗದಲ್ಲಿ ಭಾರತದ ವಿವಿಧೆಡೆ ಸ್ವಾತಂತ್ರ್ಯದ ಕಹಳೆ ಭೋರ್ಗರೆಯುತ್ತದೆ. ಸೌಮ್ಯವಾದವನ್ನು ಆಧರಿಸಿ ಹೋರಾಟ ನಡೆಸುವಂತೆ ಗಾಂಧೀಜಿ ನೀಡಿದ ಕರೆಗೆ ಸಹಜವಾಗಿಯೇ ಅಜ್ಜಂಪುರವೂ ಸ್ಪಂದಿಸುತ್ತದೆ.

ಚಿಕ್ಕಮಗಳೂರು ಜಿಲ್ಲೆಯ ಜನ ಮೆದು ಸ್ವಭಾವದವರು. ಇಲ್ಲಿಯ ಆಳ್ವಿಕೆಯು ಮೈಸೂರು ಅರಸರ ಆಣತಿಯಂತೆ ನಡೆಯುತ್ತಿತ್ತು. ಜನರ ಮೇಲೆ ಅನಗತ್ಯ ಹೊರೆಯ ಬರೆ ಇರುತ್ತಿರಲಿಲ್ಲ. ದೌರ್ಜನ್ಯ, ಶೋಷಣೆಯೂ ಹೆಚ್ಚಾಗಿರಲಿಲ್ಲ. ಉತ್ತರದಲ್ಲಿ ನಡೆದ ಹಲ್ಲೆ, ದುಷ್ಟದೌರ್ಜನ್ಯಗಳು ಇಲ್ಲಿ ನಡೆಯಲಿಲ್ಲ. ಹಾಗಾಗಿ ಬೇರೆ ಪ್ರದೇಶಕ್ಕೆ ಹೋಲಿಸಿದರೆ ಒಟ್ಟಾರೆ ಜಿಲ್ಲೆಯಲ್ಲಿ ಹೋರಾಟದ ವ್ಯಾಪ್ತಿ ಸೀಮಿತವಾಗಿತ್ತು. ಇದ್ದುದರಲ್ಲಿ ಅಜ್ಜಂಪುರ ಸುತ್ತಮುತ್ತ ಹೆಚ್ಚು ಚಟುವಟಿಕೆಗಳು ದಾಖಲಾಗಿವೆ. ಅವುಗಳತ್ತ ಗಮನ ಹರಿಸೋಣ:

ಹುಣಸಘಟ್ಟ ಗ್ರಾಮದಲ್ಲಿ ೧೯೧೦ರ ಜನವರಿ ೨ರಂದು ಸಾಮಾನ್ಯ ವ್ಯಾಪಾರಸ್ಥ ಕುಟುಂಬದಲ್ಲಿ ಹುಟ್ಟಿದವರು ಸುಬ್ರಹ್ಮಣ್ಯ ಶೆಟ್ಟರು. ಅವರು ಸುಮಾರು ಐದು ವರ್ಷದವರಿದ್ದಾಗ, ಕುಟುಂಬವು ದೊಡ್ಡ ಊರನ್ನು ಅರಸಿ ಅಜ್ಜಂಪುರಕ್ಕೆ ಬಂದು ಅಂಗಡಿ ಆರಂಭಿಸಿ ನೆಲೆಗೊಂಡ ಕಾಲಘಟ್ಟವದು. ಮಹಾತ್ಮ ಗಾಂಧೀಜಿ ಸೇರಿದಂತೆ ದೇಶಭಕ್ತರು ಹೋರಾಟದ ಕುರಿತು ಹೇಳುವ ವಿಚಾರಗಳು ಇಲ್ಲಿಯ ಜನರ ನಡುವೆ ಚರ್ಚೆಗೆ ವಸ್ತುವಾಗುತ್ತದೆ. ಊರಿಗೊಂದು ರೇಡಿಯೋ ತಂದ ಶೆಟ್ಟರು ಅದನ್ನು ಜಗಲಿಯ ಮೇಲಿಟ್ಟು ಸಂಗೀತ ಮತ್ತು ದೇಶ ವಿದೇಶದ ವಾರ್ತೆಗಳನ್ನು ಊರ ಜನರಿಗೆ ಕೇಳಿಸಲು ಆರಂಭಿಸುತ್ತಾರೆ. ಹೀಗೆ ರೇಡಿಯೋ ವಾರ್ತೆಗಳನ್ನು ಕೇಳಿದ ಮೇಲೆ ಜನರಿಗೆ ದೇಶದ ಆಗು ಹೋಗುಗಳ ಕುರಿತು ಹೆಚ್ಚು ಅರಿವಾಗತೊಡಗಿತು.

## ಗಾಂಧೀಜಿ ಭೇಟಿ

೧೯೨೭ರ ಆಗಸ್ಟ್ ೧೮ ಮತ್ತು ೧೯ರಂದು ಮಹಾತ್ಮ ಗಾಂಧಿ ಅವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸಂಗಾತಿಗಳೊಂದಿಗೆ ಪ್ರವಾಸ ಮಾಡುವ ವಿಚಾರ ಅಜ್ಜಂಪುರದ ಜನರಲ್ಲಿ



ವಿದ್ಯುತ್ ಸಂಚಾರ ಮೂಡಿಸಿತ್ತು. ಅಜ್ಜಂಪುರದ ಕೆಲ ಉತ್ಸಾಹೀ ಯುವಕರು ಕಡೂರಿಗೆ ತೆರಳಿದರು. ಗಾಂಧೀಜಿ ಅವರ ಬಗ್ಗೆ ಶ್ರದ್ಧೆ ಹೊಂದಿ ಗಾಂಧೀಮಾರ್ಗ ತುಳಿದಿದ್ದ ಸುಬ್ರಹ್ಮಣ್ಯ ಶೆಟ್ಟರು ತಮ್ಮ ಸಂಗಡಿಗರಾದ ಎ.ಪಿ.ನಾಗರಾಜ ಶೆಟ್ಟಿ, ಕೃಷ್ಣೋಜಿರಾವ್ ಚವ್ಹಾಣ್, ಏಕೋ ರಾಮಸ್ವಾಮಿ, ಸಿದ್ದಪ್ಪ, ಸಿದ್ದಲಿಂಗಣ್ಣ ಮತ್ತಿತರರ ತಂಡದೊಂದಿಗೆ ಚಿಕ್ಕಮಗಳೂರಿಗೆ ಧಾವಿಸಿ ದರ್ಶನ ಪಡೆದರು. ಅಲ್ಲಿ ಗಾಂಧೀಜಿ ಅವರ ಮಾತುಗಳಿಂದ ಪ್ರಭಾವಿತರಾದ ತಂಡದ ಸದಸ್ಯರು ರಾಷ್ಟ್ರೀಯ ನಿಧಿಗೆ ಒಂದಷ್ಟು ಹಣವನ್ನು ಕಾಣಿಕೆಯಾಗಿ ನೀಡಿದರು. ಅಸ್ಪೃಶ್ಯತಾ ನಿವಾರಣೆ, ಗ್ರಾಮೀಣಾಭಿವೃದ್ಧಿ ಕೇಂದ್ರೀಕರಿಸಿ ಮಹಾತ್ಮ ಗಾಂಧೀ ಅವರು ಆ ಸಂದರ್ಭದಲ್ಲಿ ಪ್ರಮುಖವಾಗಿ ಮಾತನಾಡಿದ್ದರು.

ದೇಶದ ಪ್ರಮುಖ ಸ್ವಾತಂತ್ರ್ಯ ಆಂದೋಲನವಾಗಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಳೀಯ ಘಟಕವನ್ನು ಎಸ್. ಸುಬ್ರಹ್ಮಣ್ಯ ಶೆಟ್ಟರ ನೇತೃತ್ವದಲ್ಲಿ ಅಜ್ಜಂಪುರದಲ್ಲಿ ಆರಂಭಿಸಲಾಯಿತು. ಅವರೇ ಪ್ರಥಮ ಅಧ್ಯಕ್ಷರು. ಸುತ್ತಮುತ್ತಲ ಹಳ್ಳಿಗಳಲ್ಲಿ ಸಂಚರಿಸಿ ಬ್ರಿಟಿಷ್ ಆಡಳಿತದ ತೊಂದರೆಗಳನ್ನು ಪ್ರಚುರಪಡಿಸುವುದರ ಜೊತೆಗೆ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಯ ಮಹತ್ವವನ್ನು ತಿಳಿಸುವ ಕಾರ್ಯ ವ್ಯಾಪಕವಾಗಿ ನಡೆಯಿತು.

ಅಜ್ಜಂಪುರದಲ್ಲಿ ಮಾಧ್ಯಮಿಕ ಶಿಕ್ಷಣ ಪಡೆಯುತ್ತಿದ್ದ ಚಿಗುರು ಮೀಸೆ ಮೂಡುವ ತರುಣರಲ್ಲೂ ಹೊಸ ವಿಚಾರ ಆಸಕ್ತಿ ಮೂಡಿಸಿತ್ತು. ಗೊ.ರು. ಚನ್ನಬಸಪ್ಪ, ಗೌ.ರು. ಓಂಕಾರಯ್ಯ ಸ್ನೇಹಿತರ ತಂಡ ಆಗಲೇ ಶಾಲಾ ಶಿಕ್ಷಕರ ಕಪ್ಪು ಟೋಪಿಗೆ ಬೆಂಕಿ ಹಚ್ಚುವ ಮೂಲಕ ತಮ್ಮ ಆಕ್ರೋಶ ಹೊರ ಹಾಕಿದ್ದರು. ಭೂಪಾಳಂ ಚಂದ್ರಶೇಖರ್ ಅವರಿಂದ ಪ್ರೇರಣೆ ಪಡೆದ, ಶಿವನಿಯಲ್ಲಿ ಶಿಕ್ಷಕರಾಗಿದ್ದ ಟಿ.ಎಸ್. ಬೈರಪ್ಪ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡ ಹಿನ್ನೆಲೆಯಲ್ಲಿ ಬ್ರಿಟಿಷ್ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾದರು. ಹಲವು ಎಚ್ಚರಿಕೆಗಳನ್ನು ನಿರ್ಲಕ್ಷಿಸಿದ ಹಿನ್ನೆಲೆಯಲ್ಲಿ ಕೆಲಸದಿಂದಲೇ ಅವರನ್ನು ವಜಾ ಮಾಡಲಾಯಿತು. ಆದರೂ ಲೆಕ್ಕಿಸದೆ ಬೈರಪ್ಪ ಈ ಭಾಗದಲ್ಲಿ ಕ್ರಿಯಾಶೀಲರಾಗಿ ಹೋರಾಟದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಹುಣಸಘಟ್ಟದ ಮಲ್ಲಿಕಾರ್ಜುನಪ್ಪ ಸಹ ಹೋರಾಟದಲ್ಲಿ ಕೈ ಜೋಡಿಸುತ್ತಾರೆ.

ಅಜ್ಜಂಪುರದಿಂದ ಸಮೀಪದ ಪ್ರೌಢಶಾಲೆ ಎಂದರೆ ಬೀರೂರಿನ ಕೆ.ಎಲ್.ಕೆ.

ಶಾಲೆ. ಗೊ.ರು.ಚನ್ನಬಸಪ್ಪ ಸೇರಿದಂತೆ ಕೆಲವು ಹುಡುಗರು ನಿತ್ಯ ಶಾಲೆಗೆ ಹೋಗಿ ಬರುತ್ತಿದ್ದರು. ಅಷ್ಟರಲ್ಲಿ ಅಜ್ಜಂಪುರ ಸತ್ಯನಾರಾಯಣ ಶೆಟ್ಟರ ನೇತೃತ್ವದಲ್ಲಿ ಅಲ್ಲೂ ಹೋರಾಟ ನಡೆದಿತ್ತು. ಮುಂದೆ ತರಳುಬಾಳು ಹಾಸ್ಟೆಲ್ ಸೇರಿದ ಗೊ.ರು.ಚ.ಬಳಗ ಗಾಂಧೀ ಟೋಪಿ ಧರಿಸಿ, ಧ್ವಜಹಿಡಿದು, 'ಭಾರತ ಮಾತಾಕೀ ಜೈ' ಎಂಬ ಘೋಷಣೆಯೊಂದಿಗೆ ಪ್ರಭಾತ್‌ಪೇರಿಯಲ್ಲಿ ಪಾಲ್ಗೊಳ್ಳುತ್ತಿತ್ತು. ಸ್ಕಾಲರ್‌ಶಿಪ್ ವಿದ್ಯಾರ್ಥಿಯಾಗಿದ್ದ ಗೊ.ರು.ಚ.ರನ್ನು ಶಿಕ್ಷಕರು ಬೆದರಿಸಿದರೂ ಹಿಂದೆಗೆಯದೆ ಗುಂಪಿನ ಮಧ್ಯದಲ್ಲಿ ಸೇರಿಕೊಂಡು ಜೋರಾಗಿಯೆ ಘೋಷಣೆ ಕೂಗುತ್ತಿದ್ದರು.

ಅತ್ತ ಚಿಕ್ಕಮಗಳೂರು ಜಿಲ್ಲೆಯಲ್ಲೂ ಕಾಂಗ್ರೆಸ್ ಸಂಘಟನೆ ಬಲಗೊಳ್ಳುತ್ತಿದ್ದ ಸಂದರ್ಭ. ಹೊಸಕೊಪ್ಪ ಕೃಷ್ಣರಾಯರು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಪದಾಧಿಕಾರಿಯಾಗಿ ಈ ಭಾಗದಲ್ಲಿ ಓಡಾಡಿ ಜನಜಾಗೃತಿ ಮೂಡಿಸುತ್ತಿದ್ದರು. ಪರಿಣಾಮ, ಹೋರಾಟದ ಜೊತೆಜೊತೆಗೆ ಸಮಾಜ ಸುಧಾರಣಾ ಚಟುವಟಿಕೆಗಳಲ್ಲಿಯೂ ಭಾಗವಹಿಸಿದ್ದರು. ಗುಡಿಕೈಗಾರಿಕೆಗಳು ಅಭಿವೃದ್ಧಿಕೊಳ್ಳಬೇಕು, ಗ್ರಾಮಗಳು ಸ್ವಾವಲಂಬನೆಗೊಳ್ಳಬೇಕು, ಅಸ್ಪೃಶ್ಯರು ಸರಿಸಮಾನವಾದ ಸ್ಥಾನಮಾನ ಹೊಂದಿ ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಬೇಕೆಂಬ ಸುಧಾರಣೆಯ ಕೂಗು ವ್ಯಾಪಕವಾಗಿ ಕೇಳಿಬಂದಿತ್ತು. ಚಿಕ್ಕಮಗಳೂರಿನಲ್ಲಿ ಅಖಿಲ ಭಾರತ ಖಾದಿ ಮತ್ತು ಗುಡಿ ಕೈಗಾರಿಕೆಗಳ ವಸ್ತು ಪ್ರದರ್ಶನ ನಡೆದಾಗ ಅಜ್ಜಂಪುರದ ಸುಬ್ರಹ್ಮಣ್ಯ ಶೆಟ್ಟರ ಬಳಗವೂ ಪಾಲ್ಗೊಂಡು ಪ್ರೇರಣೆ ಪಡೆಯಿತು.

೧೯೩೦ರ ಆಸುಪಾಸಿನಲ್ಲಿ ರೈತರ ಸಂಕಷ್ಟಗಳು ಹೆಚ್ಚಾಗುತ್ತವೆ. ರೋಗರುಜಿನಗಳೂ ವ್ಯಾಪಕವಾಗಿ ಹರಡಿ ಬದುಕು ದುಸ್ತರವೆನಿಸಿತು. ವಿದೇಶಿಯರ ವಸ್ತ್ರವನ್ನು ಬಹಿಷ್ಕರಿಸಿ ಸ್ವದೇಶಿ ವಸ್ತು–ವಸ್ತ್ರ ಬಳಕೆಯಿಂದ ಆರ್ಥಿಕ ಸ್ವಾವಲಂಬನೆಯನ್ನು ಹೊಂದಬಹುದೆಂಬ ವಿಚಾರಗಳು ಮುನ್ನೆಲೆಗೆ ಬರುತ್ತವೆ.

ಪ್ರಮುಖ ಗೃಹ ಕೈಗಾರಿಕೆಗಳಾದ ಚರಕದಿಂದ ನೂಲು ತೆಗೆದು ಖಾದಿ ಬಟ್ಟೆಯನ್ನು ತಯಾರಿಸುವ ಮೂಲಕ ಮ್ಯಾಂಚೆಸ್ಟರ್‌ನಿಂದ ಬರುತ್ತಿದ್ದ ಬಟ್ಟೆಯನ್ನು ಧಿಕ್ಕರಿಸುವ ಜನಾಂದೋಲನ ಅಜ್ಜಂಪುರದಲ್ಲೂ ವ್ಯಾಪಕವಾಗಿ



ನಡೆಯಿತು. ರಾಜ್ಯ ಪ್ರವಾಸ ಸಂದರ್ಭದಲ್ಲಿ ಮೈಸೂರು ಮಹಾರಾಜರೊಂದಿಗೆ ಗಾಂಧೀಜಿ ಮಾತುಕತೆ ನಡೆಸಿದ ಹಿನ್ನೆಲೆಯಲ್ಲಿ ಮೈಸೂರು ಪ್ರಾಂತ್ಯದಲ್ಲಿ ಚರಕದಿಂದ ನೂಲು ತೆಗೆಯುವ ಖಾದಿ ಕೇಂದ್ರಗಳನ್ನು ಆರಂಭಿಸುವ ಪ್ರಕ್ರಿಯೆ ನಡೆದಿತ್ತು. ಇಂದಿನ ಚಾಮರಾಜನಗರ ಜಿಲ್ಲೆಯ ಬದನವಾಳದಲ್ಲಿ ಮೊದಲ ಖಾದಿ ಕೇಂದ್ರ ಆರಂಭಗೊಂಡರೆ ಜೊತೆಯಲ್ಲೇ ಅಜ್ಜಂಪುರದಲ್ಲಿ ಎರಡನೆಯ ಖಾದಿ ಕೇಂದ್ರವು ಹೊಸಕೊಪ್ಪ ಕೃಷ್ಣರಾವ್ ಮತ್ತು ಬೀರೂರು ಸತ್ಯನಾರಾಯಣ ಶೆಟ್ಟಿ ಹಾಗೂ ಸುಬ್ರಹ್ಮಣ್ಯ ಶೆಟ್ಟರ ಪ್ರಯತ್ನದ ಫಲವಾಗಿ ಕಾರ್ಯಾರಂಭ ಮಾಡಿತು.

## ಖಾದಿ ಕೇಂದ್ರವಾದ ಅಜ್ಜಂಪುರ

ಕೊಲ್ಕತ್ತಾದ ಪ್ರಸಿದ್ಧ ವಿಜ್ಞಾನಿ ಪ್ರೊ. ಪ್ರಫುಲ್ಲಚಂದ ರಾಯ್ ಅಜ್ಜಂಪುರ ಖಾದಿ ಕೇಂದ್ರವನ್ನು ೧೯೩೪ರ ಸುಮಾರಿನಲ್ಲಿ ಭಾರೀ ಸಭೆಯೊಂದಿಗೆ ಸಂಭ್ರಮ ಸಡಗರದಿಂದ ಉದ್ಘಾಟಿಸಿದರು. ರಾಜ್ಯದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾದ ಕೆ.ಟಿ.ಭಾಷ್ಯಂ, ಎಚ್.ಸಿದ್ದಯ್ಯ, ಚಂಗಲರಾಯ ರೆಡ್ಡಿ, ತಿರುಮಲೆ ತಾತಾಚಾರ್ಯ ಶರ್ಮ, ಎಸ್. ನಿಜಲಿಂಗಪ್ಪ ಮತ್ತಿತರರು ಸ್ಫೂರ್ತಿದಾಯಕ ಭಾಷಣ ಮಾಡಿದರು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವಂತೆ ಕರೆ ನೀಡಿ ಸ್ವದೇಶಿ ಖಾದಿಯನ್ನು ನಾವೇ ನೇಯ್ದು ತೊಡುವುದರಲ್ಲಿ ದೇಶಭಕ್ತಿ ಅಡಗಿದೆ ಎಂದು ಮನವರಿಕೆ ಮಾಡಿದರು. ಇದೇ ಸಂದರ್ಭದಲ್ಲಿ ಖಾದಿ ತೊಡುವ ಪ್ರತಿಜ್ಞೆಯನ್ನು ಹಲವರು ಮಾಡುತ್ತಾರೆ. ಸುಬ್ರಹ್ಮಣ್ಯ ಶೆಟ್ಟರಂತೂ ತಾವಷ್ಟೇ ಅಲ್ಲ ತಮ್ಮ ಪತ್ನಿ, ಸೋದರ ಸೇರಿದಂತೆ ಕುಟುಂಬದ ಎಲ್ಲ ಸದಸ್ಯರು ಖಾದಿ ಉಡುವಂತೆ–ತೊಡುವಂತೆ ಮಾಡುತ್ತಾರೆ. ಈ ಭಾಗದಲ್ಲಿ ಹೋರಾಟಗಾರರ ಸಮವಸ್ತ್ರವೇ ಖಾದಿಯಾಗುತ್ತದೆ. ಈಗಲೂ ರಾಜಕಾರಣಿಗಳಷ್ಟೇ ಅಲ್ಲ ಜನಸಾಮಾನ್ಯರು ಕೂಡ ಇಲ್ಲಿ ಖಾದಿವಸ್ತ್ರವನ್ನು ವ್ಯಾಪಕವಾಗಿ ಬಳಸುತ್ತಿದ್ದಾರೆ.

ಹಂದಹತ್ತಿಯಿಂದ ಚರಕದ ಮೂಲಕ ನೂಲು ತೆಗೆದು ಬಿಡುವಿನ ವೇಳೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸ್ವದೇಶಿ ಆಂದೋಲನದಲ್ಲಿ ಅಂದೇ ತೊಡಗಿಸಿಕೊಂಡಿದ್ದರು. ಸುತ್ತಲ ಹತ್ತು ಹಳ್ಳಿಗಳಲ್ಲಿ ಚರಕ ಮನೆಗೊಂದರಂತೆ ನೀಡಲಾಗಿತ್ತು. ಅಜ್ಜಂಪುರ ಸಮೀಪದ ಗೌರಾಪುರದ ಬಂಧುಗಳ ಮನೆಯಲ್ಲಿ

ಎಂಬತ್ತರ ದಶಕದಲ್ಲಿಯೂ ಚರಕವಿತ್ತು. ಆದರೆ ಈಗ ಚರಕವೂ ಇಲ್ಲ, ಖಾದಿ ಕೇಂದ್ರವೂ ಬಾಗಿಲು ಹಾಕಿದೆ.

'ಖಾದಿ ಕೇಂದ್ರದಿಂದ ೪೮ ತೊಲ ತೂಕದ ಹಂಜಿಯನ್ನು ತೂಗಿ ಕೊಡುತ್ತಿದ್ದರು. ಅದರಿಂದ ದಾರ ತೆಗೆದು ಮೂರು ಅಡಿಯ ಲಡಿಗಳನ್ನು ಸುತ್ತುಕೋಲಿನ ಚೌಕದಲ್ಲಿ ಸುತ್ತಿ ೮೦ ಎಳೆಗಳಿಗೆ ಒಂದು ಅಡಿ ಎಂದು ಕಟ್ಟುಹಾಕಿ ಆನಂತರ ಏಳು ಕಟ್ಟುಗಳಿಗೆ ಒಂದು ಬಳೆ ಎಂದು ಪರಿಗಣಿಸಲಾಗುತ್ತಿತ್ತು. ಅದನ್ನು ಸುತ್ತಿ ಹೊಸೆದು ಬಳೆ ಮಾಡಿ ೪೮ ತೊಲದ ಅರಳೆಯಲ್ಲಿ ೫ ರಿಂದ ೧೦ ಬಳೆಗಳನ್ನು ಮಾಡುತ್ತಿದ್ದರು. ನೂಲು ಎಳೆ ಸಣ್ಣದಾಗಿದ್ದರೆ ಹೆಚ್ಚಿನ ಎಳೆ ಬರುತ್ತಿದ್ದವು. ಪ್ರತಿ ಮಂಗಳವಾರ ಖಾದಿ ಕೇಂದ್ರಕ್ಕೆ ನೀಡಿ ಬಳೆಗೆ ಒಂದೂವರೆ ಆಣೆಯಂತೆ ರೈತರು ಹಣ ಪಡೆಯುತ್ತಿದ್ದರು. ಅಂದು ಸಂತೆಯ ಖರ್ಚಿಗೆ ಈ ಹಣ ಬಳಕೆಯಾಗುತ್ತಿತ್ತು. ಆ ನೂಲಿನಿಂದ ಖಾದಿ ಕೇಂದ್ರದ ಕೈಮಗ್ಗದಲ್ಲಿ ಬಟ್ಟೆ ತಯಾರಿಸುತ್ತಿದ್ದರು. ಪಂಚೆ, ಅಂಗಿ, ಕೈವಸ್ತ್ರ, ತಲೆಗೆ ಸುತ್ತುವ ರುಮಾಲು, ಹೊದಿಯುವ ದುಪ್ಪಟಿ ತಯಾರಿಸಿ ಮಾರಾಟ ಮಾಡುತ್ತಿದ್ದರು' ಎಂದು ಗೌರಾಪುರದ ಓಂಕಾರಯ್ಯ ಆ ದಿನಗಳ ನೆನಪು ಮೆಲುಕು ಹಾಕುತ್ತಾರೆ. ಇದರೊಂದಿಗೆ ಬಾಲ್ಯದಲ್ಲಿ ಭಾಗವಹಿಸಿದ ಪ್ರಭಾತ್‌ಪೇರಿ ಕುರಿತು ವಿವರಿಸುವುದನ್ನು ಅವರು ಮರೆಯಲಿಲ್ಲ.

## ಚರ್ಮ ಕೌಶಲ್ಯ ತರಬೇತಿ

ಸೊಲ್ಲಾಪುರ ಸುತ್ತಮುತ್ತಲಿನಲ್ಲಿ ಚರ್ಮ ಕೆಲಸದಲ್ಲಿ ತೊಡಗಿಸಿಕೊಂಡ ಕುಟುಂಬಗಳನ್ನು ಒಟ್ಟುಗೂಡಿಸಿ ಚರ್ಮ ಹದ ಮಾಡುವ ನಾಜೂಕಿನ ಕೌಶಲ್ಯ ಅಳವಡಿಸಿಕೊಳ್ಳುವ ತರಬೇತಿಯನ್ನು ಪಿ.ಸಿ.ರಾಯ್ ನೀಡುತ್ತಿದ್ದರು. ಖಾದಿ ಕೇಂದ್ರದಲ್ಲಿ ಸೋಪು, ಊದುಬತ್ತಿ ಸೇರಿದಂತೆ ಸ್ವದೇಶಿ ವಸ್ತುಗಳ ತಯಾರಿಕೆಯ ತರಬೇತಿ ಏರ್ಪಡಿಸಲಾಯಿತು. ಸಿದ್ಧಪಡಿಸಿದ ಖಾದಿ ವಸ್ತ್ರದೊಂದಿಗೆ ಸಾಬೂನು, ಊದುಬತ್ತಿ ಮತ್ತಿತರ ಉತ್ಪನ್ನಗಳ ಮಾರಾಟದ ವ್ಯವಸ್ಥೆಯನ್ನೂ ಕಲ್ಪಿಸಲಾಗುತ್ತದೆ.

## ಅಧ್ಯಾತ್ಮದ ಸ್ಪರ್ಶ

ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಸ್ವಾವಲಂಬನೆಯ ಬೀಜವೂ ಮೊಳೆಯುತ್ತಿದ್ದ ಕಾಲದಲ್ಲಿ ಅಜ್ಜಂಪುರದ ಶಿವಾನಂದಾಶ್ರಮ ಅಧ್ಯಾತ್ಮದ ಸ್ಪರ್ಶ ನೀಡುವ ಮೂಲಕ ಜನರಲ್ಲಿ ಆತ್ಮಾಭಿಮಾನ ಮೂಡಿಸುತ್ತದೆ. ಮಹಾತ್ಮ ಗಾಂಧಿ ಅವರ ಪ್ರಿಯ ಗ್ರಂಥ 'ಭಗವದ್ಗೀತೆ'ಯನ್ನು ಇಲ್ಲಿ ಪ್ರಚುರಪಡಿಸುತ್ತಿದ್ದು, ಹೋರಾಟಗಾರ ಸುಬ್ರಹ್ಮಣ್ಯ ಶೆಟ್ಟರು ಮುಂದೆ 'ಗೀತಾಮಿತ್ರ' ಎಂಬ ಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಅವರ ಕುಟುಂಬ ವರ್ಗ ಇಂದೂ ಈ ಪತ್ರಿಕೆಯನ್ನು ಮುಂದುವರೆಸಿಕೊಂಡು ಬಂದಿದೆ. ಪ್ರತೀ ಡಿಸೆಂಬರ್‌ನಲ್ಲಿ ಗೀತಾಜಯಂತಿಯನ್ನು ಸಂಘಟಿಸಿ ಭಗದ್ಗೀತೆಯ ವಿವಿಧ ಶ್ಲೋಕಗಳ ಗಾಯನ, ವಿಶ್ಲೇಷಣೆ, ದೇಶದ ವಿವಿಧೆಡೆಯಿಂದ ವಿದ್ವಜ್ಜನರನ್ನು ಕರೆಯಿಸಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿತ್ತು.

ಗಿಡಮೂಲಿಕೆಗಳನ್ನು ಬಳಸಿ ಮನೆ ಮದ್ದು ನೀಡಿ ರೋಗರುಜಿನಗಳನ್ನು ವಾಸಿ ಮಾಡುವ ತಾಣವೂ ಆಗಿದ್ದ ಆಶ್ರಮ, ಭಜನೆ, ಸಂಕೀರ್ತನೆ ನಡೆಸುತ್ತಾ ನಿರಂತರ ಚಟುವಟಿಕೆಯಿಂದ ಕೂಡಿತ್ತು. ಭಗವದ್ಗೀತೆ ಸಂದೇಶವನ್ನು ಸಾರಲು ಪುಸ್ತಕ ಪ್ರಕಟಣೆಯನ್ನೂ ಆರಂಭಿಸಲಾಯಿತು. ದಕ್ಷಿಣದ ಗೋರಖಪುರವೆಂದು ಕೆಲವರು ಅಜ್ಜಂಪುರವನ್ನು ಗುರುತಿಸುವಂತಾಯಿತು. ಅನೇಕ ಹೋರಾಟಗಾರರು ಗುಪ್ತವಾಗಿ ಇಲ್ಲಿ ಬಂದು ತಂಗಿದ್ದು, ಬಳಿಕ ಹೋರಾಟಗಳಿಗೆ ಸಂಬಂಧಿಸಿದ ಸಂದೇಶ ರವಾನಿಸುತ್ತಿದ್ದರೆಂದು ಸ್ಥಳೀಯ ಮುಖಂಡ ಎ.ಸಿ.ಚಂದ್ರಪ್ಪ ಹೇಳುತ್ತಾರೆ. ಆಶ್ರಮದ ಒಡನಾಟದಿಂದ ಹೋರಾಟಗಾರರಿಗೆ ಎಲ್ಲ ಸಂಕಷ್ಟವನ್ನೂ ಸಮಚಿತ್ತದಿಂದ ನಿಭಾಯಿಸುವ ಧೈರ್ಯ ಸ್ಥೈರ್ಯ ಬರುತ್ತದೆ.

## ಪತ್ರಿಕೆಯ ಕೈಂಕರ್ಯ

ಅಜ್ಜಂಪುರಕ್ಕೆ 'ವಿಶ್ವ ಕರ್ನಾಟಕ' ದಿನಪತ್ರಿಕೆಯ ಪ್ರಸರಣ ಆರಂಭಗೊಂಡ ನಂತರ ದೇಶದ ಸುದ್ದಿಗಳು ಸುಲಭವಾಗಿ, ವ್ಯಾಪಕವಾಗಿ ಇಲ್ಲಿಯ ಜನರಿಗೆ ತಿಳಿಯಲಾರಂಭವಾಯಿತು. ದೇಶದ ನಾಯಕರ ಲೇಖನಗಳನ್ನು ಓದಿ ಪ್ರೇರೇಪಣೆಗೊಳ್ಳುತ್ತಾರೆ. ರೇಡಿಯೋ ಮೂಲಕವೂ ಒಂದಷ್ಟು ಹೋರಾಟದ ಮಾತುಗಳು ಕಿವಿಯ ಮೇಲೆ ಬೀಳುತ್ತವೆ. ಯುವಕರ ದೊಡ್ಡ ಪಡೆಯೇ ದೇಶದ ಬಗ್ಗೆ ಸಕಾರಾತ್ಮಕವಾಗಿ ಆಲೋಚಿಸುತ್ತಾ ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡಿ ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸುತ್ತಾರೆ. ಗ್ರಾಮೀಣ ರೈತಾಪಿ ಜನರು ರಾಷ್ಟ್ರೀಯ ಆಂದೋಲನವಾಗಿದ್ದ ಕಾಂಗ್ರೆಸ್‌ನ ಸದಸ್ಯತ್ವ ಪಡೆಯುತ್ತಾರೆ.

ಒಟ್ಟಿನಲ್ಲಿ ಇತಿಮಿತಿಯಲ್ಲಿಯೇ ಹೋರಾಟದ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರುತ್ತದೆ.

## ಅಧಿವೇಶನ: ನಿಷೇಧಾಜ್ಞೆ

೧೯೪೦ರ ಸುಮಾರಿನಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಅಧಿವೇಶನ ಅಜ್ಜಂಪುರದಲ್ಲಿ ನಿಗದಿಯಾಗುತ್ತದೆ. ಭಾರತ ಮಾತಾಕೀ ಜೈ ಎಂದರೆ ಪೋಲೀಸರ ಪೆಟ್ಟು ತಿನ್ನಬೇಕಾದ ಸಂದರ್ಭವಿದ್ದರೂ ಸಾಮಾನ್ಯ ರೈತರು ಸುಬ್ರಹ್ಮಣ್ಯ ಶೆಟ್ಟರ ಮುಂದಾಳತ್ವದಲ್ಲಿ ಅಧಿವೇಶನದ ಸಿದ್ಧತೆಯಲ್ಲಿ ತೊಡಗುತ್ತಾರೆ. ರೈಲ್ವೆ ನಿಲ್ದಾಣ ಸಮೀಪದ ಆಯಕಟ್ಟಿನ ಸ್ಥಳವನ್ನು ಗುರುತಿಸಲಾಯಿತು. ಚಿಕ್ಕನಲ್ಲೂರು ರುದ್ರಣ್ಣನವರು ಸಭೆಗಾಗಿ ತಮ್ಮ ಜಮೀನನ್ನು ಬಿಟ್ಟುಕೊಟ್ಟಿದ್ದು ಸಾವಿರಾರು ರೂಪಾಯಿ ವೆಚ್ಚ ಮಾಡಿ ನೆಲ ಸಮತಟ್ಟುಗೊಳಿಸಿ, ಚಪ್ಪರ ಹಾಕಿ, ಅಲಂಕಾರ ದೊಂದಿಗೆ ವೇದಿಕೆ ಸಿದ್ಧಪಡಿಸಿದರು. ಪೂರ್ವಸಿದ್ಧತೆಗಾಗಿ ಕೆ.ಟಿ. ಭಾಷ್ಯಂ ತಂಡ ಬಂದಿಳಿಯುತ್ತದೆ.

ಇದೇ ಸಂದರ್ಭದಲ್ಲಿ ರೈಲಿನಲ್ಲಿ ಪ್ರಯಾಣಿಸಿದ ಬ್ರಿಟಿಷ್ ಅಧಿಕಾರಿಯೋರ್ವರು ಕಿಟಿಕಿಯ ಮೂಲಕ ಭಾರೀ ಚಪ್ಪರ ಕಂಡು ಕಂಗಾಲಾಗಿ ಬ್ರಿಟಿಷ್ ಮೇಲಧಿಕಾರಿಗೆ ವಿಷಯ ಮುಟ್ಟಿಸುತ್ತಾರೆ. ಪರಿಣಾಮ ಅಧಿವೇಶನ ನಡೆಯುವ ಪ್ರದೇಶ ಜೊತೆಗೆ ೩ಕಿ.ಮೀ. ಸುತ್ತಳತೆಯಲ್ಲಿ ಬ್ರಿಟಿಷ್ ಸರ್ಕಾರ ಪೊಲೀಸರ ಮೂಲಕ ನಿಷೇಧಾಜ್ಞೆ ಜಾರಿಗೊಳಿಸುತ್ತದೆ. ಸಭೆ, ಮೆರವಣಿಗೆ ನಡೆಸದಂತೆ ಕಟ್ಟೆಚ್ಚರಿಕೆ ನೀಡಿದ ಪೊಲೀಸರು ಹಲವರ ವಿರುದ್ಧ ಬಂಧನದ ವಾರೆಂಟ್ ಹಿಡಿದು ಬೆದರಿಕೆ ತಂತ್ರವನ್ನು ಅನುಸರಿಸುತ್ತಾರೆ.

## ವಿಜಯ ಮೈದಾನ

ಅಷ್ಟರಲ್ಲಾಗಲೇ ದಾಸಪ್ಪ ಸೇರಿದಂತೆ ಹಲವು ಮಂದಿ ಸ್ವಾತಂತ್ರ್ಯ ಹೋರಾಟಗಾರರು ಅಜ್ಜಂಪುರಕ್ಕೆ ಬಂದಿದ್ದರು. ಅಧಿವೇಶನ ನಿಲ್ಲಿಸುವ ಬ್ರಿಟಿಷರ ಹುನ್ನಾರದಿಂದ ರೊಚ್ಚಿಗೆದ್ದ ಜನ ರಾಜ್ಯನಾಯಕರೊಂದಿಗೆ ಸಮಾಲೋಚನೆ ನಡೆಸಿ ಇಲ್ಲಿಂದ ನಾಲ್ಕೈದು ಕಿ.ಮೀ.ದೂರದ ಚನ್ನಾಪುರ ಹೊರ ವಲಯ ನಾಗವಂಗಲ ಮಧ್ಯದ ದಿಬ್ಬದ ಮೇಲಿನ ಜಮೀನಿನಲ್ಲಿ ಅಧಿವೇಶನ ನಡೆಸುವ ತೀರ್ಮಾನ ಮಾಡಿದರು. ಉತ್ಸಾಹದಿಂದ ಹಳ್ಳಿಯ ಮಕ್ಕಳು ತತ್‌ಕ್ಷಣವೇ



ಪಾಲ್ಗೊಳ್ಳಲು ಮುಂದೆ ಬಂದರು. ಮನೆಯಲ್ಲಿದ್ದ ಹಾರೆ, ಗುದ್ದಲಿ, ಪಿಕಾಸೆ, ಮಂಕರಿ ಹಿಡಿದು ಎತ್ತಿನಬಂಡಿ ಕಟ್ಟಿಕೊಂಡು ನೆಲ ಸಮತಟ್ಟು ಮಾಡುವ ಕೆಲಸದಲ್ಲಿ ನೂರಾರು ಮಂದಿ ಶ್ರಮದಾನ ಮಾಡುತ್ತಾರೆ. 'ವಿಜಯ ಮೈದಾನ' ಹೆಸರಿನ ದೊಡ್ಡ ಚಪ್ಪರವನ್ನೇ ಹಾಕಿ ರಾತ್ರೋ ರಾತ್ರಿ ವೇದಿಕೆ ನಿರ್ಮಿಸಿ ಸೆಡ್ಡು ಹೊಡೆದರು.

ಅಂದಿನ ಕಾಂಗ್ರೆಸ್ ಅಧ್ಯಕ್ಷರಾದ ದಾಸಪ್ಪ ಅವರನ್ನು ೧೦೮ ಜೋಡಿ ಎತ್ತುಗಳೊಡನೆ ಅಲಂಕೃತದ ರಥದಲ್ಲಿ ಮೆರವಣಿಗೆಯ ಮೂಲಕ 'ವಿಜಯ ಮೈದಾನ'ಕ್ಕೆ ಕರೆದೊಯ್ದು ಅಲ್ಲಿ ಅದ್ದೂರಿಯಾಗಿ ಸಭೆ ನಡೆಸಲಾಯಿತು. ತ್ರಿವರ್ಣಧ್ವಜ ಬಾನಂಗಳದಲ್ಲಿ ಹೆಮ್ಮೆಯಿಂದ ಹಾರಾಡಿತು. ಬ್ರಿಟಿಷರ ಕುಕೃತ್ಯಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಭಾಷಣಕಾರರು ಸ್ವಾತಂತ್ರ್ಯ ಗಳಿಸುವ ಅನಿವಾರ್ಯತೆಯನ್ನು ರೋಷಭರಿತ ಮಾತುಗಳಲ್ಲಿ ವಿವರಿಸಿದರು. ಜಯಘೋಷಗಳು ಮುಗಿಲು ಮುಟ್ಟಿದವು. ಅಧಿವೇಶನದಲ್ಲಿ ಪ್ರಮುಖವಾಗಿ ಪಾಲ್ಗೊಂಡಿದ್ದ ಕೆ.ಸಿ.ರೆಡ್ಡಿ, ಎಸ್.ನಿಜಲಿಂಗಪ್ಪ, ಎಚ್.ಸಿ.ದಾಸಪ್ಪ, ಸುಬ್ರಹ್ಮಣ್ಯಂ, ಸಿದ್ದಯ್ಯ ಮತ್ತಿತರ ನಾಯಕರಿಂದ ಭಾರೀ ಮೆಚ್ಚುಗೆಯ ಮಾತುಗಳು ವ್ಯಕ್ತವಾದವು. ಇದು ಇಲ್ಲಿಯ ಸಂಘಟಕರಲ್ಲಿ ಮತ್ತಷ್ಟು ಹೋರಾಟದ ಹುಮ್ಮಸ್ಸನ್ನು ತಂದುಕೊಡುತ್ತದೆ. ಅಜ್ಜಂಪುರದ ಇತಿಹಾಸದಲ್ಲಿ ಐತಿಹಾಸಿಕ ದಿನವಾಗಿ ದಾಖಲಾಗುತ್ತದೆ ಎಂದು 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಕೃತಿಯಲ್ಲಿ ಉಲ್ಲೇಖಗೊಂಡಿದೆ.

ಮುಂದೆ ಇದೇ 'ವಿಜಯ ಮೈದಾನ' ತಾಣದಲ್ಲಿ ರೈಲ್ವೆ ನಿಲ್ದಾಣ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದಿಂದ ಆದೇಶ ಜಾರಿಯಾಯಿತು. ನಾಗವಂಗಲ ಗೇಟ್ ರೈಲ್ವೆ ನಿಲ್ದಾಣವೆಂದು ಇಂದು ಖ್ಯಾತಿ ಹೊಂದಿದ್ದು, ಈ ಭಾಗದ ರೈತಾಪಿ ಜನರಿಗೆ ಸುಲಭ ರೈಲು ಪ್ರಯಾಣಕ್ಕೆ ಸಹಕಾರಿಯಾಗಿದೆ.

೧೯೪೨ರ 'ಬ್ರಿಷರೇ ಭಾರತಬಿಟ್ಟು ತೊಲಗಿ' ಕರೆ ಈ ಭಾಗದಲ್ಲಿ ಜೋರಾಗಿಯೇ ಪ್ರತಿಧ್ವನಿಸುತ್ತದೆ. ಭಾರತ ಬಿಟ್ಟು ತೊಲಗಿ ಚಳುವಳಿಗೆ ಅಧಿವೇಶನ ಹೊಸ ಹುರುಪನ್ನು ತಂದುಕೊಡುತ್ತದೆ. ತಂಡೋಪತಂಡವಾಗಿ ಯುವಕರು ಭಾರತ ಮಾತೆಗೆ, ಗಾಂಧೀಜಿಗೆ ಜಯಕಾರ ಹಾಕಿ ಬೀದಿ ಬೀದಿಗಳಲ್ಲಿ ಸುತ್ತಾಡಿದರು. ಸರ್ಕಾರದ ಧೋರಣೆ ವಿರುದ್ಧ ಬಸ್ ನಿಲ್ದಾಣ, ರೈಲು ನಿಲ್ದಾಣ, ಸಂತೆ, ಚೌಕಗಳಲ್ಲಿ ಭಾಷಣಗಳು ಭೋರ್ಗರೆದವು. ಸರ್ಕಾರಿ

ಕಚೇರಿ ಕಟ್ಟಡಗಳ ಮೇಲೆ ತ್ರಿವರ್ಣ ಧ್ವಜ ಹಾರಿಸುವಿಕೆ, ಪ್ರತಿಬಂಧಕಾಜ್ಞೆ ಭಂಗಗೊಳಿಸಿ ವಿದೇಶಿ ವಸ್ತು ಸುಡುವುದು, ಪಾನ ನಿರೋಧ ಸೂಚಿಸಿ ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ಮುಂತಾದ ಚಳುವಳಿ – ಇವೆಲ್ಲ ಅಜ್ಜಂಪುರ ಪಟ್ಟಣದಿಂದ ನಿಧಾನವಾಗಿ ಸುತ್ತಮುತ್ತಲಿನ ಹಳ್ಳಿಗಳಿಗೂ ವ್ಯಾಪಿಸಿದವು.

## ವಿದೇಶಿ ಪಟಾಕಿ ಬಹಿಷ್ಕಾರ

ದೀಪಾವಳಿ, ಅಮ್ಮನ ಹಬ್ಬ, ಉತ್ಸವ–ಜಾತ್ರೆಗಳಲ್ಲಿ ಬಾಣ ಬಿರುಸಿನ ಪಟಾಕಿ ಪ್ರದರ್ಶನ ಈ ಭಾಗದಲ್ಲಿ ಹಿಂದಿನಿಂದಲೂ ಆಕರ್ಷಣೀಯವಾಗಿ ನಡೆಯುತ್ತಿತ್ತು. ಆಗ ಚೀನಾ ಸೇರಿದಂತೆ ವಿದೇಶಗಳಿಂದ ಹೊಸ ಹೊಸ ರೀತಿಯ ಪಟಾಕಿಗಳು ಬ್ರಿಟಿಷ್ ಅಧಿಕಾರಿಗಳ ಮೂಲಕ ಅಜ್ಜಂಪುರವನ್ನೂ ತಲುಪಿತ್ತು. ಹೋರಾಟಗಾರರು ವಿದೇಶಿ ವಸ್ತುಗಳ ಜೊತೆಗೆ ಕಡಿಮೆ ಬೆಲೆಗೆ ಸಿಗುತ್ತಿದ್ದ ಚೀನಾ ಪಟಾಕಿಯನ್ನು ಬಹಿಷ್ಕರಿಸಲು ಕರೆ ನೀಡಿ ಆಂದೋಲನವನ್ನೇ ನಡೆಸಿದ್ದು ಇಲ್ಲಿಯ ವಿಶೇಷಗಳಲ್ಲೊಂದು. ಚೀನಾ ಪಟಾಕಿ ಮಾರುವವರ ಅಂಗಡಿಗಳ ಮುಂದೆ ಪ್ರತಿಭಟನೆ ನಡೆಸಿ ಬಾಗಿಲು ಮುಚ್ಚಿಸುವ ಕೆಲಸವೂ ನಡೆಯಿತು. ಮಕ್ಕಳು ಚೀನಾ ಪಟಾಕಿ ಖರೀದಿಸದಂತೆ ಅವರ ಮನವೊಲಿಕೆಯ ಕೆಲಸವೂ ಜೊತೆ ಜೊತೆಯಲ್ಲೇ ನಡೆಯುತ್ತದೆ.

## ತಾಲ್ಲೂಕು ಕಚೇರಿಯ ಮೇಲೆ ತ್ರಿವರ್ಣ ಧ್ವಜ

ಆಗ ತಾಲ್ಲೂಕು ಕೇಂದ್ರವಾಗಿದ್ದ ತರೀಕೆರೆಯ ತಾಲ್ಲೂಕು ಕಚೇರಿಯ ಮೇಲೆ ಕಾಂಗ್ರೆಸ್ ನೇತೃತ್ವದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವ ತೀರ್ಮಾನವನ್ನು ಅಜ್ಜಂಪುರದಲ್ಲಿ ಎಸ್.ಸುಬ್ರಹ್ಮಣ್ಯ ಶೆಟ್ಟಿ ಮತ್ತು ಟಿ.ಸಿ.ಬಸಪ್ಪನವರ ನೇತೃತ್ವದ ಸಭೆಯಲ್ಲಿ ಕೈಗೊಳ್ಳಲಾಯಿತು. ಅಜ್ಜಂಪುರದ ನೂರಾರು ಜನ ಜಿ.ಕೆ.ಸಿದ್ದಪ್ಪ ಶೆಟ್ಟಿ, ಕೆ.ಜಿ.ಸಿದ್ದಪ್ಪ, ಕೆ.ಜಿ.ರುದ್ರಣ್ಣ, ಎನ್.ಶೆಟ್ಟೋಜಿ ರಾವ್, ಎ.ಆರ್.ಭೀಮಯ್ಯ, ಜಿ.ತಿಮ್ಮಯ್ಯ, ಟಿ.ಭೀಮೋಜಿ ರಾವ್, ಏಕೋರಾಮಸ್ವಾಮಿ, ಟಿ.ಕೃಷ್ಣೋಜಿ ರಾವ್, ಎಂ.ನಿಂಗೋಜಿ ರಾವ್, ಎನ್.ಮಂಜುನಾಥ, ಪಿ.ಕೆ.ಗಣೇಶ ರಾವ್ ನೇತೃತ್ವದಲ್ಲಿ ಕಛೇರಿ ಮುಂದೆ ಧಾವಿಸಿದರು. ತರೀಕೆರೆ ಭಾಗದ ನೂರಾರು ಮಂದಿಯೂ ಸೇರ್ಪಡೆಗೊಂಡಿದ್ದರು. ಪರಿಸ್ಥಿತಿ ಬಿಗುವಾದಾಗ ಲಾಠಿ ಬೀಸಿದ ಪೊಲೀಸ್ ಪಡೆ ಹಿಗ್ಗಾಮುಗ್ಗಾ ಥಳಿಸಿ ಜನರನ್ನು ಚದುರಿಸಿತು. ಜನ ದಿಕ್ಕಾಪಾಲಾಗಿ ಓಡಿದರು. ಕೈಗೆ ಸಿಕ್ಕವರನ್ನು ಪೊಲೀಸ್ ವಾಹನಕ್ಕೆ ತುಂಬಿ ಬೀರೂರು, ಕಡೂರು, ಚಿಕ್ಕಮಗಳೂರು ಪೊಲೀಸ್ ಠಾಣೆಗೆ ಕರೆದೊಯ್ದರು. ದೇಶದ್ರೋಹದ ಆರೋಪ ಹೊರಿಸಿ ಪ್ರಕರಣ ದಾಖಲಾಯಿತು.



ಸುಬ್ರಹ್ಮಣ್ಯ ಶೆಟ್ಟಿ, ಮಂಡಿ ಸಿದ್ದಲಿಂಗಣ್ಣ, ಕೃಷ್ಣೋಜಿ ರಾವ್, ಏಕೋರಾಮ ಸ್ವಾಮಿ, ಗುರುಶಾಂತಪ್ಪ, ಸಿದ್ದಪ್ಪ ಸೇರಿದಂತೆ ಸುಮಾರು ೧೫ ಜನರನ್ನು ಸರ್ಕಾರ ಬಂಧಿಸಿ ಕರೆದೊಯ್ಯುವಾಗ ಊರಿಗೆ ಊರೇ ನೆರದಿತ್ತು. ಯಾವ ಜೈಲಿನಲಿಡುತ್ತೀರಿ, ಏನು ಶಿಕ್ಷೆ, ವಾಪಾಸು ಬರುತ್ತಾರೋ ಇಲ್ಲವೋ ಪ್ರಶ್ನೆಗಳನ್ನು ಪೊಲೀಸರು ನಿರ್ಲಕ್ಷಿಸಿ ಜನರ ಕೆಂಗಣ್ಣಿಗೆ ಪಾತ್ರರಾದರು. ಸ್ವತಃ ಸುಬ್ರಹ್ಮಣ್ಯ ಶೆಟ್ಟರೆ ಜನರನ್ನು ಸಮಾಧಾನಪಡಿಸಬೇಕಾಯಿತು. ಬಂಧಿತರಿಗೆ ಕುಂಕುಮ ಹಚ್ಚಿ, ಆರತಿ ಬೆಳಗಿ, ಖಾದಿ ಹಾರ ಹಾಕಿ ಜಯಕಾರದೊಂದಿಗೆ ಒಂದು ರೀತಿಯ ಮೆರವಣಿಗೆಯೊಂದಿಗೆ ಬೀಳ್ಕೊಟ್ಟದ್ದು ಅಪರೂಪದ ಪ್ರಸಂಗವೆಂದು ಖ್ಯಾತ ಲೇಖಕ ಬಿ.ಚಂದ್ರೇಗೌಡ ತಮ್ಮ ಕೃತಿಯಲ್ಲಿ ಹೃದಯಂಗಮವಾಗಿ ಕಟ್ಟಿಕೊಟ್ಟಿದ್ದಾರೆ.

ಜೈಲಿನಲ್ಲಿದ್ದಾಗಲೂ ತಮ್ಮ ಜೊತೆಗಾರರು ನಿರುತ್ಸಾಹಗೊಳ್ಳದಂತೆ ಶೆಟ್ಟರು ಎಚ್ಚರಿಕೆ ವಹಿಸುತ್ತಾರೆ. ನಿತ್ಯ ಬೆಳಗ್ಗೆ ಎದ್ದು ತಮ್ಮ ದೈನಂದಿನ ಕೆಲಸ ಮುಗಿಸಿ ಸ್ವಾತಂತ್ರ್ಯ ಹೋರಾಟಗಾರರಿಂದ ಧ್ವಜವಂದನೆ ಮಾಡಿಸುತ್ತಿದ್ದರು. ಸಾಮೂಹಿಕ ಪ್ರಾರ್ಥನೆ ಆದ ನಂತರ ನೂಲುವುದು, ಜೈಲಿನ ಅಧಿಕಾರಿಗಳು ಕೊಡುವ ರಾಗಿ–ಜೋಳವನ್ನು ಹಾಡುಗಳನ್ನು ಹಾಡುತ್ತಾ ಬೇಸರವಿಲ್ಲದೆ ಬೀಸುವುದನ್ನು ಅಭ್ಯಾಸ ಮಾಡಿಸುತ್ತಿದ್ದರು.

## ಮೋಹನದಾಸನ ಸಾವು

೧೯೩೮ರಲ್ಲಿ ಪಾನನಿರೋಧ ಚಳುವಳಿ ರಾಷ್ಟ್ರವನ್ನು ವ್ಯಾಪಿಸಿತ್ತು. ಸೇಂದಿ ಬಹಿಷ್ಕರಿಸುವ ಹೋರಾಟವೂ ಅಜ್ಜಂಪುರದಲ್ಲಿ ಪ್ರಬಲವಾಗಿಯೇ ನಡೆಯಿತು. ಶ್ರಮಜೀವಿಗಳು ರಕ್ತ ಬಸಿದು ದುಡಿದ ಪುಡಿಗಾಸು ಸೇಂದಿಗೆ ಸುರಿದು ಆರೋಗ್ಯವನ್ನೂ ಹಾಳುಮಾಡಿಕೊಳ್ಳುತ್ತಿದ್ದರು. ಸೇಂದಿ ಮೂಲಕ ತೆರಿಗೆ ಸಂಗ್ರಹಿಸಿ ಬ್ರಿಟಿಷರು ಆದಾಯ ಮೂಲ ಮಾಡಿಕೊಂಡಿದ್ದು ಹೋರಾಟಗಾರರನ್ನು ರೊಚ್ಚಿಗೆಬ್ಬಿಸಿತ್ತು. ಈಚಲುಮರಗಳನ್ನು ಕಡಿಯುವುದು, ಸೇಂದಿ ಲಾರಿಗಳನ್ನು ಅಡ್ಡಗಟ್ಟಿ ನಾಶಪಡಿಸುವುದು ಅಜ್ಜಂಪುರ ಸುತ್ತಮುತ್ತ ವ್ಯಾಪಕವಾದಾಗ ಈ

ಹೋರಾಟದ ನೇತೃತ್ವ ವಹಿಸಿದ್ದ ಸುಬ್ರಹ್ಮಣ್ಯ ಶೆಟ್ಟರನ್ನು ಪೊಲೀಸರು ಬಂಧಿಸಿದರು. ನರಸಿಂಹರಾಜಪುರದ ಬಂದೀಖಾನೆಯಲ್ಲಿ ಅವರನ್ನು ಇರಿಸಲಾಯಿತು. ಶೆಟ್ಟರ ವ್ಯಾಪಾರ ನೋಡಿಕೊಳ್ಳುವ ಹೊಣೆಗಾರಿಕೆ ಅವರ ತಮ್ಮ ಸತ್ಯನಾರಾಯಣ ಶೆಟ್ಟರ ಮೇಲೆ ಬಿತ್ತು. ಅವರ ವ್ಯಾಸಂಗಕ್ಕೂ ಎಳ್ಳುನೀರು ಬಿತ್ತು. ಪತ್ನಿ ರುಕ್ಮಿಣಿಯಮ್ಮ ಮನೆಯ ಜವಾಬ್ದಾರಿ ಹೊರಬೇಕಾಯಿತು.

ಇದೇ ಸಂದರ್ಭದಲ್ಲಿ ಸುಬ್ರಹ್ಮಣ್ಯ ಶೆಟ್ಟರ ಪುತ್ರ ತೀವ್ರ ಜ್ವರಕ್ಕೆ ತುತ್ತಾಗಿ ನರಳತೊಡಗಿದ. ಜೈಲಿಗೂ ವಿಷಯ ತಲುಪಿತು. ಒಂದೆರಡು ದಿನಗಳಲ್ಲಿ ಬದುಕುವುದೇ ಕಷ್ಟವೆಂಬ ಮಾತು ಕೇಳಿತು. ಜೊತೆಗಾರರು ಪೆರೋಲ್ ಮೇಲೆ ತೆರಳಿ ಮಗನನ್ನು ನೋಡಿಕೊಂಡು ಬರಲು ಒತ್ತಾಯಿಸಿದರು. ಪರಿಸ್ಥಿತಿ ಜೈಲಿನ ಅಧಿಕಾರಿಗಳ ಮೂಲಕ ಸರ್ಕಾರಕ್ಕೂ ತಲುಪಿತು. ಕಾಂಗ್ರೆಸ್ ಮುಖಂಡರ ಪ್ರಯತ್ನದಿಂದ ಬಿಡುಗಡೆ ಪ್ರಕ್ರಿಯೆ ಆರಂಭವಾಗುತ್ತದೆ. ಇದಕ್ಕೆ ಸ್ಪಂದಿಸಿದ ಬ್ರಿಟಿಷ್ ಅಧಿಕಾರಿಗಳು 'ಮತ್ತೆ ಹೋರಾಟಕ್ಕೆ ಇಳಿಯುವುದಿಲ್ಲ' ಎಂಬ ಮುಚ್ಚಳಿಕೆ ಬರೆದು ಕೊಟ್ಟರೆ ಬಿಡುಗಡೆ ಮಾಡುವುದಾಗಿ ಸರ್ಕಾರದ ಷರತ್ತು ವಿಧಿಸುತ್ತಾರೆ.

ಮಗನ ಆರೋಗ್ಯಕ್ಕಿಂತ ಸ್ವಾತಂತ್ರ್ಯದ ಹೋರಾಟವೇ ಮುಖ್ಯವೆಂದು ಶೆಟ್ಟರು ಭಾವಿಸುತ್ತಾರೆ. ಸಂಧಿವಾತ ಜ್ವರದಿಂದ ನರಳುತ್ತಿದ್ದ ಪುತ್ರ ತಂದೆಗಾಗಿ ಕನವರಿಸುತ್ತಲೇ ತಾಯಿಯ ತೊಡೆಯ ಮೇಲೆ ಕೊನೆಯುಸಿರು ಎಳೆಯುತ್ತಾನೆ. ಕೊನೆಗೂ ಜೈಲುವಾಸವೇ ಮುಂದುವರೆಯುತ್ತದೆ. ಗಾಂಧೀಜಿಯವರ ಮೇಲೆ ಅಪಾರ ಅಭಿಮಾನ ಅಕ್ಕರೆ ಹೊಂದಿದ್ದ ಶೆಟ್ಟರು, ತಮ್ಮ ಜ್ಯೇಷ್ಠ ಪುತ್ರನಿಗೆ 'ಮೋಹನದಾಸ' ಎಂದು ನಾಮಕರಣ ಮಾಡಿದ್ದರು. 'ಪುತ್ರಶೋಕ ನಿರಂತರ' ಎನ್ನುವಂತೆ ಜೀವಿತದ ಕೊನೆಯವರೆಗೂ ಅವರ ಮನದಾಳದಲ್ಲಿ ನೋವು ಮಡುಗಟ್ಟಿದ್ದು ಒಳಗಣ್ಣಿಗಷ್ಟೇ ಅರಿವಾಗುತ್ತಿತ್ತು.

ಈ ಸುದ್ದಿ ಕೇಳಿದ ಎಸ್.ನಿಜಲಿಂಗಪ್ಪ ಸೇರಿದಂತೆ ರಾಜ್ಯದ ಹಿರಿಯ ಮುಖಂಡರು ಅಜ್ಜಂಪುರದ ಸುಬ್ರಹ್ಮಣ್ಯ ಶೆಟ್ಟರ ಮನೋಸ್ಥೈರ್ಯ ಕಂಡು ಅಚ್ಚರಿಪಟ್ಟರು. ಈ ಸುದ್ದಿ ರಾಜ್ಯಾದ್ಯಂತ ಪಸರಿಸಿತು. ಹೋರಾಟದ ನಿಷ್ಠೆ, ದೇಶಭಕ್ತಿ ಶ್ಲಾಘನೆಗೊಳಗಾಯಿತು. ಆದರೆ ಕುಟುಂಬದ ಸದಸ್ಯರು ಬೆಂದು ನೊಂದರು. ಶಿಕ್ಷೆ ಪೂರ್ಣಗೊಂಡ ನಂತರ ಸೆರೆವಾಸದಿಂದ ಬಿಡುಗಡೆಗೊಂಡು ಅಜ್ಜಂಪುರಕ್ಕೆ ಹಿಂತಿರುಗಿದಾಗ ಅವರಿಗೆ ವೀರೋಚಿತ ಸ್ವಾಗತ ಸಿಗುತ್ತದೆ. ಮನೆಗೆ ಯಜಮಾನ ಮರುಳಿದ ಸಂತಸ ಒಂದೆಡೆ ಆದರೆ, ಕುಟುಂಬದ ಕುಡಿಯನ್ನು ಕಳೆದುಕೊಂಡ ದುಃಖ ಇನ್ನೊಂದೆಡೆ ಸ್ಫೋಟಿಸುತ್ತದೆ. ಎಲ್ಲರೂ ಕಣ್ಣೀರುಗರೆಯುತ್ತಾರೆ. ಪತ್ನಿ ರುಕ್ಮಿಣಿಯಮ್ಮ, ತಮ್ಮ ಸತ್ಯನಾರಾಯಣಶೆಟ್ಟಿ ಸೇರಿದಂತೆ ಕುಟುಂಬಸ್ಥರನ್ನೆಲ್ಲ ಸಂತೈಸಿದ ಸುಬ್ರಹ್ಮಣ್ಯಶೆಟ್ಟರು ಇದೊಂದು ಖಾಸಗಿ ದುಃಖವೆಂಬಂತೆ ಪರಿಭಾವಿಸಿದರು. ಮರುದಿನದಿಂದಲೇ ಹಿಂದಿನಂತೆ ತಮ್ಮ ಚಳುವಳಿಯನ್ನು ಮುಂದುವರೆಸಿದರು.



## ಚನ್ನಗಿರಿಯತ್ತ ಭೀಮಯ್ಯ ಚಿತ್ತ

ಸಹಜವಾಗಿಯೇ ಪಕ್ಕದ ಚನ್ನಗಿರಿಯತ್ತ ಸೇಂದಿ ಸಾಹುಕಾರರ ಚಿತ್ತ ಹರಿದಿತ್ತು. ಅಲ್ಲಿನ ಕಟ್ಟಾಳು ಎ.ಆರ್.ಭೀಮಯ್ಯ ಅವರ ಮುಖಂಡತ್ವದಲ್ಲಿ ಮಸಣಕೆರೆಯಲ್ಲಿ ಈಚಲುಮರ ಕಡಿಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಯಲ್ಲೋಜಿ ರಾವ್, ವೆಂಕೋಬ ರಾವ್, ವೆಂಕಟ ರಾವ್, ಏಕೋರಾಮ ಸ್ವಾಮಿ, ಯಲ್ಲಪ್ಪ, ವೈ.ಜಿ.ಹನುಮಂತಪ್ಪ, ಪಿ.ಕೆ.ಗಣೇಶ ರಾವ್, ಎಂ.ವಿಠಲ ರಾವ್ ನೇತೃತ್ವದಲ್ಲಿ ಸುಮಾರು ೫೦ ಜನರ ಗುಂಪು ದಾರಿಯುದ್ದಕ್ಕೂ ಚಳುವಳಿ ನಡೆಸುತ್ತಾ ಚನ್ನಗಿರಿ ತಲುಪಿ, ತಾಲ್ಲೂಕು ಕಚೇರಿ ಮೇಲೆ ಬಾವುಟ ಹಾರಿಸಲು ಉಪಕ್ರಮಿಸಿದರು. ಬ್ರಿಟಿಷರ ಗುಲಾಮರಾದ ಅಧಿಕಾರಿಗಳು ರೊಚ್ಚಿಗೆದ್ದ ಪರಿಣಾಮ ಪೊಲೀಸರು ಸ್ವಾತಂತ್ರ್ಯ ಯೋಧರ ಮೇಲೆ ರಾಕ್ಷಸರಂತೆ ಎರಗಿ ಲಾಠಿ ಪ್ರಹಾರಿಸಿ ದೌರ್ಜನ್ಯ ಎಸಗಿದರು. ಹಲವರನ್ನು ಬಂಧಿಸಿದರು. ಪೊಲೀಸರ ದೌರ್ಜನ್ಯಕ್ಕೆ ಜಗ್ಗದ ಅಜ್ಜಂಪುರದ ಕಲಿಗಳು ರಾತ್ರೋರಾತ್ರಿ ಊರು ಸೇರಿ ಮತ್ತೆ ದೊಡ್ಡ ತಂಡದೊಂದಿಗೆ 'ಚನ್ನಗಿರಿ ಚಲೋ' ಚಳುವಳಿ ನಡೆಸುತ್ತಾರೆ. ಕಾಡುಮೇಡುಗಳಲ್ಲಿ ಅಲೆದು ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ ಹೋರಾಟಗಾರರು ಶಾಸನ ಭಂಗಮಾಡಿ ಮರಳಿದ ಸಾಹಸ ಗಾಥೆ ಅಜ್ಜಂಪುರದಲ್ಲಿ ಮನೆಮಾತಾಗಿದೆ.

## ಅಸ್ಪೃಶ್ಯತೆಗೆ ಉತ್ತರ

ಮೇಲು–ಕೀಳು ಭಾವನೆ ಆಳವಾಗಿ ಬೇರೂರಿದ್ದ ಕಾಲಘಟ್ಟದಲ್ಲಿ ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯುವ ಸವಾಲು ಸಹಜವಾದದ್ದು. ಈ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲೇ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟ ಸಮುದಾಯದವರೂ ವಾಸವಾಗಿದ್ದರು. ಅಸ್ಪೃಶ್ಯ ದಲಿತರ ಜೊತೆಗೆ ಸಾಮರಸ್ಯದಿಂದ ವರ್ತಿಸಬೇಕು

ಎಂದು ಗಾಂಧೀಜಿ ಹೇಳಿದ್ದು ಇಲ್ಲಿಯೂ ಪರಿಣಾಮ ಬೀರಿತ್ತು. ದಲಿತರ ಕೇರಿಗಳಿಗೆ ಸುಬ್ರಹ್ಮಣ್ಯ ಶೆಟ್ಟರ ನೇತೃತ್ವದಲ್ಲಿ ಅನೇಕರು ಭೇಟಿ ನೀಡಲು ಆರಂಭಿಸಿದರು. ಕೇರಿಗಳಲ್ಲಿ ಭಜನೆ, ಸತ್ಸಂಗ, ಗಾಂಧೀ ಫೋಟೋ ಇಟ್ಟುಕೊಂಡು ನಡೆಸಲಾಗುತ್ತಿತ್ತು. ಅಲ್ಲಿಯ ಮಕ್ಕಳನ್ನು ಇತರೆ ಕೇರಿಗಳಿಗೂ ಕರೆತಂದು ಮುಕ್ತವಾಗಿ ಎಲ್ಲರೊಂದಿಗೆ ಬೆರೆಯಲು ಅವಕಾಶ ಮಾಡಿಕೊಡಲಾಯಿತು. ತಮ್ಮ ಮನೆಯಲ್ಲೂ ಕೇರಿಯ ಮಕ್ಕಳನ್ನು ಕೂರಿಸಿಕೊಂಡು ಸಿಹಿ ತಿನಿಸುವ, ಕಥೆ–ಹಾಡು ಹೇಳಿ ಕೊಡುವ ಪರಿಪಾಠವನ್ನು ಶೆಟ್ಟರು ಆರಂಭಿಸಿದರು. ಸಾಮರಸ್ಯದ ಬೆಸುಗೆ ಗಟ್ಟಿಯಾಗಿ ಉಳಿಯಲು ಈ ಪ್ರಯತ್ನಗಳು ಕಾರಣೀಭೂತ ವಾಯಿತೆಂಬುದನ್ನು ಮರೆಯಲಾಗದು.

## ಹರಿಕಥೆಯ ಮೂಲಕ ಹುನ್ನಾರ

೧೯೪೨ರ ಚಳುವಳಿಯ ಕಾಲದಲ್ಲಿ ಅಜ್ಜಂಪುರದಲ್ಲಿ ಸ್ವಲ್ಪಮಟ್ಟಿನ ಉಗ್ರವಾದವೂ ಇಣಿಕಿಹಾಕಿತ್ತು. ಎರಡನೆಯ ವಿಶ್ವ ಮಹಾಸಮರ ಕಾಲಕ್ಕೆ ಹಳ್ಳಿಗಳಲ್ಲಿ ಶಿವಕಥೆ–ಹರಿಕಥೆ ನಡೆಸಿ ಬ್ರಿಟಿಷರ ಸೈನ್ಯ ಸೇರಲು ಸ್ಥಳೀಯ ಯುವಕರನ್ನು ಪ್ರೋತ್ಸಾಹಿಸುವ ಹುನ್ನಾರ ನಡೆಯಿತು. ಕನ್ನಡಿಗರೇ ಒಬ್ಬರು ಮುಂದಾಳತ್ವ ವಹಿಸಿ ಸೈನ್ಯ ಸೇರಿದ ಪ್ರತಿ ಯುವಕರ ಹೆಸರಿನಲ್ಲಿ ತಲಾ ಐದು ರೂಪಾಯಿ ಸಂಭಾವನೆ ಆಡಳಿತಗಾರರಿಂದ ಪಡೆಯುತ್ತಿದ್ದ ವಿಚಾರ ಹೋರಾಟಗಾರರ ಗಮನಕ್ಕೆ ಬಂತು. ಊರೆಲ್ಲ ಒಂದಾಗಿ ಕೀರ್ತನಕಾರರನ್ನು ಊರಿನಿಂದ ಹೊರಹಾಕಿದ ಘಟನೆಯನ್ನು ಪತ್ರಕರ್ತರೂ ಆಗಿದ್ದ ಸ್ವಾತಂತ್ರ್ಯ ಹೋರಾಟಗಾರ ನಾಗರಾಜ ಶೆಟ್ಟಿ ದಾಖಲಿಸುತ್ತಾರೆ.

## ಮೈಸೂರು ಚಲೋ

ಇದಾದ ಬಳಿಕ, ಅಜ್ಜಂಪುರದ ಹೋರಾಟಗಾರರಿಗೆ 'ಮೈಸೂರು ಚಲೋ' ಚಳವಳಿಯಲ್ಲಿ ಭಾಗವಹಿಸುವಂತೆ ಕರೆ ಬರುತ್ತದೆ. ಅಜ್ಜಂಪುರದ ಮಂದಿ ಹೋರಾಟಕ್ಕೆ ಸಜ್ಜಾಗುತ್ತಾರೆ. ಯುವಕರ ತಂಡವನ್ನು ಸಜ್ಜುಗೊಳಿಸಿ ಸುಬ್ರಹ್ಮಣ್ಯ ಶೆಟ್ಟರು ಮುಂದಾಳುತನ ವಹಿಸುತ್ತಾರೆ. ಕಾಲುನಡಿಗೆಯಲ್ಲೇ ಮೈಸೂರು ತಲುಪುವ ಯೋಜನೆ ರೂಪುಗೊಳ್ಳುತ್ತದೆ. ದಾರಿಯುದ್ದಕ್ಕೂ ಸಭೆಗಳನ್ನು ನಡೆಸುತ್ತಾ, ಕಾನೂನು ಭಂಗಗೊಳಿಸುತ್ತಾ ಜನರನ್ನು ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಟಕ್ಕೆ ಪ್ರೇರೇಪಿಸುತ್ತಾ ತಂಡ ಮುನ್ನಡೆಯುತ್ತದೆ. ಹಾಸನಕ್ಕೆ ಪಾದಯಾತ್ರೆ ತಲುಪಿದಾಗ



ಭಾರೀ ಸಭೆಯು ಏರ್ಪಟ್ಟಿರುತ್ತದೆ. ಶೆಟ್ಟರು ಆಕ್ರೋಶಭರಿತವಾಗಿ ಮಾತನಾಡುತ್ತಿದ್ದಾಗ ಪೊಲೀಸ್ ಪಡೆ ಮಧ್ಯ ಪ್ರವೇಶಿಸಿತು. ಲಾಠಿ ಬೀಸಿ ಸಿಕ್ಕ ಸಿಕ್ಕವರನ್ನು ಹೊಡೆದು ಚಚ್ಚಿ ಜನರನ್ನು ಚದುರಿಸಿತು. ಅಜ್ಜಂಪುರದ ಯುವಕರ ಜೊತೆಗೆ ಸ್ಥಳೀಯ ಹಲವರನ್ನು ಬಂಧಿಸಿ ಹಾಸನದ ಜೈಲಿಗೆ ಅಟ್ಟಲಾಯಿತು. ಅಲ್ಲಿಂದ ಅವರೆಲ್ಲ ಬಿಡುಗಡೆಯಾಗಿ ಮೈಸೂರು ತಲುಪಿ ಅಲ್ಲೂ ಚಳುವಳಿ ನಡೆಸಿ ಊರಿಗೆ ವಾಪಸ್ಸಾದರು.

ಗಾಂಧೀಜಿ ಅವರು ಪಾನ ನಿರೋಧದ ಚಳುವಳಿಗೆ ಕರೆ ಕೊಟ್ಟಾಗ ದೇಶವ್ಯಾಪಿ ಸ್ಪಂದನೆಯಂತೆ ಅಜ್ಜಂಪುರದಲ್ಲೂ ತೀವ್ರವಾಗಿಯೇ ಚಳುವಳಿ ನಡೆಯಿತು. ಹಲವರ ಬಂಧನ ನಂತರ ಬಿಡುಗಡೆ ಮಾಮೂಲಿ ಪ್ರಕ್ರಿಯೆಗೆ ಸಾಕ್ಷಿಯಾಯಿತು.

ಅಂತಿಮ ಹಂತದ ಚಳುವಳಿ ಕಾಡ್ಗಿಚ್ಚಿನಂತೆ ಭರದಿಂದ ಹರಡುತ್ತಿದ್ದು ಅಜ್ಜಂಪುರವನ್ನೂ ವ್ಯಾಪಿಸಿತು. ಜಿಲ್ಲಾ ಪೊಲೀಸರ ಕ್ರೂರದೃಷ್ಟಿ ಅಜ್ಜಂಪುರದ ಮೇಲೆ ಬಿತ್ತು. ಯಾವುದೇ ಮುನ್ಸೂಚನೆ ಕೊಡದೆ ಭಾರೀ ಪೊಲೀಸ್‌ಪಡೆ ದಾಳಿ ಮಾಡಿತು. ಎಸ್. ಸುಬ್ರಹ್ಮಣ್ಯ ಶೆಟ್ಟರು, ಮಾಳಿಗೆ ಕರಿಯಪ್ಪ, ಕೆ.ವೆಂಕೋಜಿರಾವ್, ಸಿ.ಜಿ.ತಿಮ್ಮಯ್ಯ, ಜಿ.ತಿಮ್ಮಯ್ಯ, ಜಾವೂರು ಸಿದ್ದಪ್ಪ, ಟೈಲರ್ ಮಲ್ಲಪ್ಪ, ಗೋವಿಂದಪ್ಪ, ಕೆ.ಜಿ.ವೀರಣ್ಣ, ರುದ್ರಪ್ಪ, ಕೆ.ಚನ್ನಬಸವಪ್ಪ. ಎಸ್.ವೈ.ನಾಗಣ್ಣ ಶೆಟ್ಟಿ, ಟಿ.ಕೃಷ್ಣೋಜಿರಾವ್ ಚವ್ಹಾಣ್, ಎ.ಆರ್.ಭೀಮಪ್ಪ, ಯಲ್ಲೋಜಿರಾವ್, ಸಿದ್ದಲಿಂಗಪ್ಪ, ವೈ.ಜಿ.ಹನುಮಂತಪ್ಪ, ಎ.ಜಿ.ಮರುಳಸಿದ್ದಪ್ಪ, ವಿ.ಎನ್.ರಾಮದಾಸ್, ಎಲ್.ರಾಮಶೆಟ್ಟಿ, ಕೆ.ದೇವೋಜೀ ರಾವ್, ಎಲ್‌ಸುಬ್ರಹ್ಮಣ್ಯ ಶೆಟ್ಟಿ, ಬಿ.ಎಂ.ಏಕೋರಾಮಸ್ವಾಮಿ, ಬಿ.ಎಂ.ಮಲ್ಲಪ್ಪ ಮತ್ತಿತರರನ್ನು ಬಂಧಿಸಿದಾಗಲೂ ನೂರಾರು ಮಂದಿ ನೆರೆದು ಸಂಭ್ರಮದಿಂದಲೇ ಜೈಕಾರ ಹಾಕುತ್ತ ಬೀಳ್ಕೊಟ್ಟರು.

## ಉದುರಿದ ಪೇದೆಯ ಹಲ್ಲುಗಳು

ಬಂಧನದ ಸಂದರ್ಭದಲ್ಲಿ ಪೊಲೀಸ್ ಪೇದೆ ಅಸಹನೆ ತೋರಿಸಿದಾಗ ಸಿಡಿಮಿಡಿಗೊಂಡ ನಂಜುಂಡಪ್ಪ ಎಂಬ ಯುವಕನು ಪೇದೆಯ ಕೆನ್ನೆಗೆ ಬಾರಿಸಿದಾಗ ಅವನ ಹಲ್ಲುಗಳು ಉದುರಿದವೆಂದು 'ಸ್ವಾತಂತ್ರ್ಯ ಸಮರದಲ್ಲಿ ಅಜ್ಜಂಪುರದ ಪಾತ್ರ' ಕಿರುಹೊತ್ತಿಗೆಯಲ್ಲಿ ಕೃಷ್ಣೋಜಿರಾವ್ ದಾಖಲಿಸಿದ್ದಾರೆ.

ಹೋರಾಟದಲ್ಲಿ ಲಾಠಿ ಪೆಟ್ಟುತಿಂದ ಮಲ್ಲಪ್ಪ, ಮರಿಯಪ್ಪ, ನಿರುಳ್ಳಿ ಸಿದ್ದಪ್ಪ, ಕವಾಳ ಗಂಗಣ್ಣ, ಮಲ್ಲೇಲಿಂಗಪ್ಪ, ಮಲ್ಲಿಕಾರ್ಜುನಯ್ಯ, ಶೆಟ್ಟರ ಹನುಮಣ್ಣ, ಕೆ.ಜಿ.ವೀರಣ್ಣ, ಕುದ್ನಾಳ್ ಗಂಗಣ್ಣ, ಮಂಡಿ ಸಿದ್ದಪ್ಪ, ಗವಿಯಣ್ಣ, ಭದ್ರಣ್ಣ, ಆತ್ತಿತ್ತರುದ್ರಪ್ಪ, ಮಲ್ಲೇಲಿಂಗಪ್ಪ, ತುಳೋಜೀ ರಾವ್, ಸಿದ್ದರಾಮಯ್ಯ, ಮಾಸ್ತರ್ ಸಿದ್ರಾಮಣ್ಣ, ರಾಯಪ್ಪ, ಕೆ.ಬಿ.ತಿಮ್ಮಯ್ಯ, ಭಂಗಿ ಸಿದ್ರಾಮಣ್ಣ, ಮಾದಣ್ಣ ಮತ್ತಿತರರನ್ನು ಅವರು ನೆನಪು ಮಾಡಿಕೊಳ್ಳುತ್ತಾರೆ.

ಅಜ್ಜಂಪುರ, ತಾವರೆಕೆರೆ ಮತ್ತು ಚನ್ನಗಿರಿಯಲ್ಲಿ ಪೊಲೀಸ್‌ಠಾಣೆ, ಶಾಲೆಗಳ ಮೇಲೆ ತ್ರಿವರ್ಣ ಧ್ವಜ ಹಾರಿಸುವ ಪ್ರಯತ್ನ ನಡೆದಿದ್ದನ್ನು ನೆನಪಿಸಿಕೊಳ್ಳುವ ಎ.ಆರ್.ಭೀಮಯ್ಯ, ಆಗಿನ ಗಲಾಟೆ ಕಾಲದಲ್ಲಿ ಏಟುತಿಂದ ನೋವನ್ನು ಜೀವನದ ಕೊನೆಯ ದಿನಗಳವರೆಗೂ ಅನುಭವಿಸುತ್ತಾರೆ.

## ಸೇಂದಿ ಗುಡಾಣ ಧ್ವಂಸ

ಹಿರೇನಲ್ಲೂರು ಪೆಂಟೆ ಮತ್ತು ಉಂಬ್ರಾಣಿ ಸೇಂದಿ ವನದಿಂದ ದೊಡ್ಡಗಾತ್ರದ ಮಣ್ಣಿನ ಗುಡಾಣಗಳಲ್ಲಿ ಗುತ್ತಿಗೆದಾರರು ಸೇಂದಿಯನ್ನು ತಂದು ಅಜ್ಜಂಪುರ ಸುತ್ತಮುತ್ತ ಮಾರಾಟ ಮಾಡುತ್ತಿದ್ದರು. ಮಂಡಿಮನೆ ಸಿದ್ಲಿಂಗಪ್ಪ ನೇತೃತ್ವದಲ್ಲಿ ಬಂಕನಕಟ್ಟೆ ಸಿದ್ದಪ್ಪ, ನೀರಗುಂದಿ ಕೃಷ್ಣಪ್ಪ, ಪಿಟಕ್ಲಿ ಸಿದ್ದಪ್ಪ ಮತ್ತಿತರರ ತಂಡ ರಾತ್ರಿವೇಳೆ ಕಂಬಳಿ ಅಥವಾ ಗೊಪ್ಪೆಹೊದ್ದು ಸೇಂದಿ ಗುಡಾಣವನ್ನು ಒಡೆದುಹಾಕಿ ಪರಾರಿಯಾಗುತ್ತಿದ್ದರು. ೧೯೪೨ರ ಸಂದರ್ಭದಲ್ಲಿ ಈ ಗುಂಪು ಪೊಲೀಸರಿಗೆ ಸೆರೆಸಿಕ್ಕು ಚಿಕ್ಕಮಗಳೂರು ಜೈಲು ಸೇರಿ ಅಲ್ಲಿಂದ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲೂ ಹದಿನೈದು ದಿನ ಸೆರೆವಾಸ ಅನುಭವಿಸಿ, ಸ್ವಾತಂತ್ರ್ಯ ಬಂದ ನಂತರ ಊರಿಗೆ ಹಿಂತಿರುಗಿದರು. ಹಿರಿಯರಿಂದ ತಿಳಿದ ಈ ಕತೆಯನ್ನು ಮೆಡಿಕಲ್ ಶಿವಾನಂದ ನೆನಪು ಮಾಡಿಕೊಳ್ಳುತ್ತಾರೆ. ಇಲ್ಲಿನ ಕುರುಬ ಸಮಾಜದ ಹಿರಿಯ ಮುಖಂಡರಾಗಿದ್ದ ಜೋಗಿ ತಿಮ್ಮಯ್ಯ ಮತ್ತು ಅವರ ಪುತ್ರ ಜಿ.ಟಿ.ಮೂಡ್ಲಿಗಿರಿಯಪ್ಪ ಒಂದೇ ಮನೆಯ ಈ ಇಬ್ಬರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿದ್ದರು.

## ಕಾಶಿಯಲ್ಲಿ ಆ್ಯಸಿಡ್ ಧಾಳಿ

ಅಜ್ಜಂಪುರ ಮಣ್ಣಿನಲ್ಲಿ ಬೆಳೆದ ಸ್ವಾತಂತ್ರ್ಯ ಪ್ರೇಮ ದೂರದ ಪವಿತ್ರ ಕಾಶಿ ನಗರದಲ್ಲೂ ಪ್ರಕಟಗೊಂಡ ಆಸಕ್ತಿದಾಯಕ ಪ್ರಕರಣವಿದು. ಅಜ್ಜಂಪುರದಿಂದ ಕೇವಲ ಒಂದೂವರೆ ಕಿ.ಮೀ.ದೂರದ ಗೌರಾಪುರದ ಜಂಗಮ ವೇದಮೂರ್ತಿ ಮಲ್ಲಾಳ ದೊಡ್ಡಮಲ್ಲಯ್ಯ ಅವರ ಹಿರಿಯ ಮಗ ಉಮಾಪತಿಶಾಸ್ತ್ರಿ ವೇದಾಧ್ಯಯನಕ್ಕಾಗಿ ಕಾಶಿಯ ಶ್ರೀ ಜಂಗಮವಾಡಿ ಮಠಕ್ಕೆ ತೆರಳಿದ್ದರು. ಅಲ್ಲಿ ವೀರಶೈವ ಪರಂಪರೆಯ ಅಧ್ಯಯನಕ್ಕಾಗಿ ಮಠಾಧಿಪತಿಗಳಾಗುವವರನ್ನು ವಿಶೇಷವಾಗಿ ಕಳುಹಿಸಿಕೊಡುವ ಪದ್ಧತಿ ಹಿಂದಿನಿಂದಲೂ ಜಾರಿಯಲ್ಲಿದೆ. ವಿವಿಧೆಡೆಯಿಂದ ಬಂದಿದ್ದ ಅಧ್ಯಾತ್ಮ ಪಿಪಾಸುಗಳನ್ನು ಸ್ವಾತಂತ್ರ್ಯ ಚಳುವಳಿಯೂ ಆಕರ್ಷಿಸಿತ್ತು. ದೊಡ್ಡ ಮಠಗಳ ಉತ್ತಾರಾಧಿಕಾರಿಗಳಾಗುವವರೂ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿದ್ದಾಗ, ಗೌರಾಪುರದ ಉಮಾಪತಿಯೂ ಅವರೊಂದಿಗೆ ಸಾಥ್ ನೀಡುತ್ತಿದ್ದ. ಉಮಾಪತಿಯನ್ನು 'ಆನಂದಪುರಂ' ಗವಿಮಠಕ್ಕೆ ಉತ್ತರಾಧಿಕಾರಿಯಾಗಿಸುವ ಉದ್ದೇಶದಿಂದ ಅಂದಿನ ಪಟ್ಟಾಧ್ಯಕ್ಷರಾದ ಶ್ರೀ ಸಚ್ಚಿದಾನಂದ ಸ್ವಾಮೀಜಿಗಳು ಕಳುಹಿಸಿದ್ದರು. ಆದರೆ ಉಮಾಪತಿ ಸ್ವಾತಂತ್ರ್ಯ ಹೋರಾಟದಲ್ಲೇ ಹೆಚ್ಚು ಆಸಕ್ತಿ ತೋರಿದ. ಇದರಿಂದ ಕುಪಿತರಾದ ಸ್ಥಳೀಯ ಕೆಲವು ಸ್ವಾತಂತ್ರ್ಯ ಹೋರಾಟ ವಿರೋಧಿಗಳು ಗಂಗಾನದಿಯ ಸ್ನಾನಘಟ್ಟದಲ್ಲಿ ಉಮಾಪತಿಯ ಮುಖಕ್ಕೆ ಆ್ಯಸಿಡ್ ಎರಚಿ ವಿಕಾರಗೊಳಿಸಿದರಂತೆ. ಮುಂದೆ ಗವಿಮಠಕ್ಕೆ ಪಟ್ಟವನ್ನೂ ಮಾಡಲಿಲ್ಲ ಎಂದು ವಯೋವೃದ್ಧ ಸಾಹಿತಿ ಗೌ.ರು.ಓಂಕಾರಯ್ಯ ನೆನಪಿಸಿಕೊಳ್ಳುತ್ತಾರೆ.

ಬಾಲ್ಯದಲ್ಲಿ ತಾವೂ ಪ್ರಭಾತ್‌ಪೇರಿಯಲ್ಲಿ ಪಾಲ್ಗೊಂಡಿದ್ದನ್ನು ಮೆಲುಕು ಹಾಕುವ ಅವರು ಚನ್ನಾಪುರ ಮತ್ತು ನಾಗವಂಗಲ ಗೇಟ್ ನಡುವೆ ವಿಜಯ ಮೈದಾನದಲ್ಲಿ ೧೯೪೦ರಲ್ಲಿ ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂ ಸೇವಕನಾಗಿ ಪಾಲ್ಗೊಂಡು ರಾತ್ರೋರಾತ್ರಿ ಚಪ್ಪರ ಹಾಕಿ, ಸಾವಿರಾರು ಜನರಿಗೆ ಅಡುಗೆ ಮಾಡಿ ಬಡಿಸುವ ಕೈಂಕರ್ಯದಲ್ಲಿ ತೊಡಗಿದ್ದನ್ನು ಹೇಳುತ್ತಾರೆ. ಕಾಂಗ್ರೆಸ್ ವತಿಯಿಂದ ನಡೆದ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದು ಶಿಕ್ಷಕ ವೃತ್ತಿಯ ಜೊತೆಗೆ ಜನಜಾಗೃತಿಯಲ್ಲಿಯೂ ಪಾಲ್ಗೊಂಡಿದ್ದನ್ನು ಅವರು ಹೆಮ್ಮೆಯಿಂದ ಸ್ಮರಿಸುತ್ತಾರೆ.

## ಪೆಪ್ಪರಮೆಂಟ್ ಆಕರ್ಷಣೆ

ಅಜ್ಜಂಪುರದ ಮಕ್ಕಳು ನಿತ್ಯ ಶಾಲೆಯಲ್ಲಿ ಕಲಿತು ವಿದ್ಯಾವಂತರಾಗಬೇಕು;

ಅಷ್ಟೇ ಅಲ್ಲ, ಗಾಂಧಿಟೋಪಿ ಧರಿಸಿ ಭಗವದ್ಗೀತೆ ಪಠಿಸಿ, ಖಾದಿ ತೊಡುವಂತೆ ಪ್ರೇರೇಪಿಸಲು ಸುಬ್ರಹ್ಮಣ್ಯ ಶೆಟ್ಟರು ೪೦ರ ದಶಕದಲ್ಲಿ ವಿಶೇಷವಾಗಿ ಪರಿಶ್ರಮಿಸುತ್ತಾರೆ. ಪ್ರಭಾತ್‌ಪೇರಿಯಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುತ್ತಾರೆ. ಅಜ್ಜಂಪುರ ಮುಖ್ಯರಸ್ತೆಯಲ್ಲಿ ಅವರ ಕಿರಾಣಿ ಅಂಗಡಿ ಇದ್ದು, ಅಲ್ಲಿ ನಿಂತು ಮಕ್ಕಳಿಗೆ ನಿತ್ಯ ಶಾಲೆಗೆ ಹೋಗುವಾಗ ಮತ್ತು ಬರುವಾಗ ಪೆಪ್ಪರಮೆಂಟ್ ಕೊಟ್ಟು ಮನವೊಲಿಸುತ್ತಿದ್ದರು. ಸಿಹಿಸಿಹಿ–ಹುಳಿಹುಳಿ ಆಗಿರುತ್ತಿದ್ದ ಕಿತ್ತಲೆತೊಳೆ ಆಕಾರದ ವಿವಿಧ ಬಣ್ಣದ ಪೆಪ್ಪರಮೆಂಟ್ ಆಸೆಗಾಗಿ ತಾವೂ ಚಿಕ್ಕಂದಿನಲ್ಲಿ ಪ್ರಭಾತಪೇರಿಯಲ್ಲಿ ಪಾಲ್ಗೊಳ್ಳುತ್ತಿದುದ್ದನ್ನು ಅಜ್ಜಂಪುರ ಸಾಂಸ್ಕೃತಿಕ ಚಿಂತಕ ಎ.ಸಿ.ಚಂದ್ರಪ್ಪ ಈಗಲೂ ಬಣ್ಣಿಸುತ್ತಾರೆ.

ಅಂದು ಸ್ವಾತಂತ್ರ್ಯ ಚಳುವಳಿಗಳಲ್ಲಿ ಸುಬ್ರಹ್ಮಣ್ಯ ಶೆಟ್ಟರ ಜೊತೆಗೆ ಜೋಗಿತಿಮ್ಮಯ್ಯ, ಶೆಟ್ರು ಸಿದ್ದಪ್ಪ, ಮಂಡಿ ಸಿದ್ದಲಿಂಗಪ್ಪ, ಪಿಟಕಲ್ ಸಿದ್ದಯ್ಯ ಮತ್ತಿತರರ ನೇತೃತ್ವದಲ್ಲಿ ಪಿಕೆಟಿಂಗ್, ಧ್ವಜ ಮೆರವಣಿಗೆ, ಪ್ರತಿಭಟನೆ, ಕಾಂಗ್ರೆಸ್ ಸಭೆಗಳು ನಡೆಯುತ್ತಿತ್ತೆಂದೂ ನೆನೆಯುತ್ತಾರೆ.

## ಮಹಾದೇವ ದೇಸಾಯಿ ಜೊತೆ ಸಂಚಾರ

ಚಿಕ್ಕಮಗಳೂರಿನಲ್ಲಿ ಹುಟ್ಟಿ ವ್ಯಾಪಾರಕ್ಕಾಗಿ ಅಜ್ಜಂಪುರದಲ್ಲಿ ನೆಲೆಸಿದ ಎಸ್.ವೈ.ನಾಗಣ್ಣಶೆಟ್ಟಿ ಚಳುವಳಿಯಲ್ಲಿ ಭಾಗವಹಿಸಿದ ಕಾರಣಕ್ಕಾಗಿ ಮೂರುಬಾರಿ ಬಂಧಿತರಾಗುತ್ತಾರೆ, ಮನೆ ಜಪ್ತಿಯಾಗುತ್ತದೆ. ದೇಶದ ಅಗ್ರಗಣ್ಯ ಹೋರಾಟಗಾರ ಗಾಂಧೀಜಿ ಆಪ್ತರಾಗಿದ್ದ ಮಹಾದೇವ ದೇಸಾಯಿ ಈ ಭಾಗದಲ್ಲಿ ಸಂಚರಿಸುವಾಗ ಅವರೊಂದಿಗೆ ಮಾರ್ಗದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದುದನ್ನು ಸ್ವತಃ ಅವರೇ ಡಾ.ಸೂರ್ಯನಾಥ ಕಾಮತ್ ಸಂಪಾದಕತ್ವದ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಕೃತಿಯಲ್ಲಿ ದಾಖಲಿಸಿದ್ದಾರೆ. ತಾಳಿಕೆರೆ ಮತ್ತು ಎಚ್.ಸಿದ್ದಯ್ಯನವರ ಜೈಲಿನಲ್ಲಿ ರಾಗಿ ಬೀಸುತ್ತಿದ್ದ ಭಾವಚಿತ್ರದ ಪ್ರತಿಗಳನ್ನು ಮುದ್ರಣ ಮಾಡಿ ಹಂಚುತ್ತಿದ್ದಾಗ ಹಿರಿಯೂರಿನಲ್ಲಿ ಬಂಧನಕ್ಕೊಳಗಾದ ಘಟನೆಯನ್ನೂ ಉಲ್ಲೇಖಿಸಿದ್ದಾರೆ. ಆದರೆ ಬಂಧನಗಳು ಹೋರಾಟದ ಕೆಚ್ಚನ್ನು ಹೆಚ್ಚಿಸಿದ್ದವೇ ಹೊರತು, ಹೋರಾಟಗಾರರೆಂದೂ ಕುಗ್ಗಿರಲಿಲ್ಲ.

## ಲಿಂಗಪ್ಪ ಗಾಯನ ಸೇವೆ

ಶಿವನಿ ಸಮೀಪದ ಕಲ್ಲಳ್ಳಿಯ ಕೆ.ಆರ್.ಲಿಂಗಪ್ಪ ಕಾನೂನು ಪದವಿ



ಗಳಿಸಿ ಹೊಟ್ಟೆಪಾಡಿಗಾಗಿ ಆಹಾರ ಇಲಾಖೆಯಲ್ಲಿ ಬಿಲ್ ಕಲೆಕ್ಟರ್ ಆಗಿ ನೌಕರಿ ಸೇರಿರುತ್ತಾರೆ. ವಿದ್ಯಾವಂತರಾಗಿ ಸಾಕಷ್ಟು ಅರಿವು ಹೊಂದಿದ್ದು ದೇಶದ ಆಗುಹೋಗು ಅರಿತಿದ್ದರೂ ಕುಟುಂಬದ ಬಡತನ ಬ್ರಿಟಿಷರ ಕೈ ಕೆಳಗಿನ ಸರ್ಕಾರಿ ನೌಕರಿಗೆ ಹಚ್ಚಿತ್ತು. ಉತ್ತಮ ಕಂಠದ ಗಾಯಕರಾಗಿದ್ದ ಲಿಂಗಪ್ಪ ಅಲ್ಲಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಸಭೆಗಳಲ್ಲಿ ಲಾವಣಿ ಹೇಳುವ ಮೂಲಕ ಜನರ ಗಮನ ಸೆಳೆಯುತ್ತಾರೆ. ಬಹುತೇಕ ಸಭೆಗಳು ಇವರ ನಾಡಗೀತೆಯಿಂದಲೇ ಆರಂಭಗೊಳ್ಳುತ್ತಿತ್ತು ಎಂದು ಕರ್ನಾಟಕ ಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಪ್ರೊ.ಹಾಲಪ್ಪ ತಮ್ಮ 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಇತಿಹಾಸ' ಕೃತಿಯಲ್ಲಿ ದಾಖಲಿಸಿದ್ದಾರೆ.

ಸರ್ಕಾರದ ವಿರೋಧಿ ಹೋರಾಟದ ಸಭೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಸಂಗತಿ ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದು ಲಿಂಗಪ್ಪನವರಿಗೆ ಎಚ್ಚರಿಕೆಯ ಸಂದೇಶ ರವಾನೆಯಗುತ್ತದೆ. ಜೊತೆಗಾರರ ಸ್ನೇಹದ ಕರೆ, ಹೋರಾಟದ ಆಕರ್ಷಣೆ ಕಡಿಮೆಯಾಗದೆ ಲಿಂಗಪ್ಪ ಮುಜುಗರ ಅನುಭವಿಸುತ್ತಾರೆ. ಚಿತ್ರದುರ್ಗದ ಮುರುಘಾಮಠಕ್ಕೆ ಕಾರ್ಯಾರ್ಥವಾಗಿ ಹೋಗಿದ್ದಾಗ ಅಲ್ಲಿಯ ಜಗದ್ಗುರುಗಳಾಗಿದ್ದ ಶ್ರೀಜಯದೇವ ಮುರುಘರಾಜೇಂದ್ರ ಸ್ವಾಮೀಜಿಗಳವರು ಅಡ್ವೊಕೇಟ್ ಲಿಂಗಪ್ಪ ಎಂದು ಆಶೀರ್ವದಿಸಿದ ನಂತರ ಜ್ಞಾನೋದಯವಾಗುತ್ತದೆ. ಅಲ್ಲಿಂದ ಊರಿಗೆ ಹಿಂತಿರುಗಿದ ಲಿಂಗಪ್ಪ ವಿಚಾರವಿನಿಮಯ ಮಾಡಿ ನೌಕರಿ ತ್ಯಜಿಸುತ್ತಾರೆ. ಕರಿಕೋಟು ಹಾಕಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ಹೋರಾಟಗಾರ ಟಿ.ಸಿ.ಬಸಪ್ಪ ಇವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದರು. ನಂತರದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪರ ವಕಾಲತ್ತು ಹಾಕಲು ಸಿದ್ಧರಾದರು. ಲಿಂಗಪ್ಪನವರ ಕಾರ್ಯಕ್ಷೇತ್ರ ತರೀಕೆರೆಗೆ ಸ್ಥಳಾಂತರಗೊಂಡಿತು.

## ಜೈಲಿನಲ್ಲೂ ಹೋರಾಟ

೧೯೨೭ರ ಆಗಸ್ಟ್ ೧೮ರಂದು ಕಡೂರಿಗೆ ಗಾಂಧೀಜಿ ಬರುತ್ತಾರೆಂದು ಅರಿತು ಐವತ್ತರ ಗಡಿಯಲ್ಲಿದ್ದ ಕೃಷಿಕ ಮಾಳಿಗೆ ಕರಿಯಪ್ಪ ಸ್ನೇಹಿತರೊಂದಿಗೆ ಗಾಂಧೀಜಿಯವರನ್ನು ಭೇಟಿಮಾಡಿ ಸ್ಫೂರ್ತಿ ಪಡೆದವರು. ಈ ಭೇಟಿಯು ಅವರಲ್ಲಿ ಹೋರಾಟದ ಕೆಚ್ಚನ್ನು ಹೆಚ್ಚಿಸಿತು. ಮುಂದಿನ ದಿನಗಳಲ್ಲಿ ಅಜ್ಜಂಪುರದಲ್ಲಿ ನಡೆಯುತ್ತಿದ್ದ ಅನೇಕ ಹೋರಾಟಗಳಲ್ಲಿ ಪಾಲ್ಗೊಂಡು ಕಾನೂನುಭಂಗ

ಚಳವಳಿಯನ್ನು ಮಾಡುತ್ತಾರೆ. ಮೊದಲ ಬಾರಿಗೆ ಸರ್ಕಾರದ ವಿರುದ್ಧ ಕಾರ್ಯನಿರ್ವಹಿಸಿ ದೇಶದ್ರೋಹದ ಆರೋಪ ಎದುರಿಸುತ್ತಾರೆ. ಅವರನ್ನು ಬಂಧಿಸಲು ಪೊಲೀಸರು ಪ್ರಯತ್ನಿಸಿದಾಗ ಹೆದರಿ ಅಡಗಿ ಕುಳಿತವರು ದೇಶಸೇವೆಯ ದಾಸ್ಯಮುಕ್ತಿ ನೆನಪು ಮಾಡಿಕೊಂಡು ಧೈರ್ಯದಿಂದ ಹೊರಬಂದು ಪೊಲೀಸರ ವಶವಾಗುತ್ತಾರೆ. ವಿಚಾರಣೆ ನಡೆದು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಬೆಂಗಳೂರಿನ ಸೆಂಟ್ರಲ್‌ಜೈಲ್ ಸೇರುತ್ತಾರೆ. ಅಲ್ಲಿಯ ಅವ್ಯವಸ್ಥೆಗಳ ವಿರುದ್ಧ ಸ್ವಲ್ಪ ಹಿರಿಯರಾದ ಕರಿಯಪ್ಪ ಪ್ರತಿಭಟಿಸಿ ಹೋರಾಟಗಾರರಿಗೆ ನ್ಯಾಯ ದೊರಕಿಸಿಕೊಟ್ಟಿದ್ದನ್ನು 'ಸುವರ್ಣ' ಕೃತಿ ದಾಖಲಿಸುತ್ತದೆ.

## ಬಾಣಾವರ ರೈಲು ನಿಲ್ದಾಣ ಧ್ವಂಸ

ಕೊರಟಗೆರೆಯ ಪ್ರಭುದೇವ್ ಬಾಲ್ಯದಲ್ಲೇ ತಬ್ಬಲಿಯಾಗಿ ಬೆಂಗಳೂರು ಸೇರಿದವರು. 'ವಿಶ್ವ ಕರ್ನಾಟಕ' ಪತ್ರಿಕೆಯನ್ನು ಮನೆಮನೆಗೆ ಹಾಕುತ್ತಲೇ ಖರ್ಚು ವೆಚ್ಚ ಸರಿತೂಗಿಸುತ್ತಿದ್ದರು. ಆ ದಿನಗಳಲ್ಲಿ ಹೋರಾಟಗಾರರಾದ ಟಿ.ಡಿ.ಶರ್ಮ ಮತ್ತು ಸಿದ್ದವನಹಳ್ಳಿ ಕೃಷ್ಣಶರ್ಮರ ಪರಿಚಯವಾಗಿ ಅವರ ಕಛೇರಿಯಲ್ಲೆ ಆಶ್ರಯ ಪಡೆಯುತ್ತಾರೆ. ಹೋರಾಟದ ಮಾಹಿತಿ ಬಾಲ್ಯದಲ್ಲೆ ಅರಿತು ತೊಡಗಿಸಿಕೊಂಡವರು. ೧೯೪೨ರಲ್ಲಿ ಟಿಕೆಟ್ ಇಲ್ಲದೆ ಪ್ರತಿಭಟನಾರ್ಥವಾಗಿ ಬೆಂಗಳೂರು–ದಾವಣಗೆರೆ ರೈಲಿನಲ್ಲಿ ಪ್ರಯಾಣಿಸುವಾಗ ಬಾಣಾವರ ಸಮೀಪ ರೈಲಿನಿಂದ ಹೊರ ಹಾಕಲ್ಪಡುತ್ತಾರೆ. ಜೊತೆಗಾರರನ್ನು ಒಟ್ಟುಗೂಡಿಸಿಕೊಂಡು ಅಲ್ಲಿಯ ರೈಲುನಿಲ್ದಾಣಕ್ಕೆ ಬೆಂಕಿಹಚ್ಚಿ ದಾಂಧಲೆ ನಡೆಸುತ್ತಾರೆ. ಅಷ್ಟರಲ್ಲಿ ಪೊಲೀಸ್ ಪಡೆ ಸುತ್ತುವರೆಯುತ್ತದೆ. ಕೆಲವರನ್ನು ವಶಕ್ಕೆ ಪಡೆಯುತ್ತದೆ. ಪ್ರಭುದೇವ ಪೊಲೀಸರ ಕಣ್ಣುತಪ್ಪಿಸಿ ಒಳದಾರಿ ಹಿಡಿದು ಅಜ್ಜಂಪುರ ಸೇರುತ್ತಾರೆ.

## ಶಿವನಿಯಲ್ಲಿ ಹೆಂಡ ಬಂದ್

ಪಾನ ನಿರೋಧ ಚಳುವಳಿ ಅಂಗವಾಗಿ ಶಿವನಿ ಗ್ರಾಮದಲ್ಲಿ ಹೆಂಡದ ಅಂಗಡಿ ಬಂದ್ ಮಾಡುವ ತೀರ್ಮಾನವಾಗುತ್ತದೆ. ಹೊರಾಟಗಾರರಾದ ಪ್ರಭುದೇವ ಅವರು ಈ ಚಳವಳಿಯ ನೇತೃತ್ವ ವಹಿಸಿ ಹೆಂಡದ ಅಂಗಡಿಗೆ ಅಗ್ನಿಸ್ಪರ್ಶ ಮಾಡುತ್ತಾರೆ. ಕುಪಿತ ಮಾಲೀಕ ಪೊಲೀಸರಿಗೆ ದೂರು ನೀಡಿದಾಗ



ಇದನ್ನೇ ಕಾಯುತ್ತಿದ್ದ ಪೊಲೀಸರು ಕಾರ್ಯಪ್ರವೃತ್ತರಾಗುತ್ತಾರೆ. ಹೋರಾಟಗಾರರಿಗೆ ಬಲೆ ಬೀಸುತ್ತಾರೆ. ಇಲ್ಲಿಂದ ತಪ್ಪಿಸಿಕೊಂಡು ಹೊರನಡೆದ ಪ್ರಭುದೇವ್ ಜಾವೂರು ಹೊಸಳ್ಳಿಯಲ್ಲಿ ಬಸಪ್ಪ ಎಂಬುವವರ ಮನೆಯಲ್ಲಿ ರಕ್ಷಣೆ ಪಡೆದರು. ಅದೇ ಊರಿನಲ್ಲಿ ಕೊಲೆ ನಡೆದಿದ್ದು ಎರಡು ಗುಂಪುಗಳು ಪರಸ್ಪರ ಆರೋಪ ಪ್ರತ್ಯಾರೋಪದಲ್ಲಿ ತೊಡಗಿದ್ದರೂ ಪ್ರಭುದೇವ ಬಗ್ಗೆ ಯಾರೂ ಮಾಹಿತಿ ಹೊರಹಾಕುವುದಿಲ್ಲ.

ಬೆಳಗಿನ ಜಾವ ಬಹಿರ್ದೆಸೆಗೆಂದು ಹೊರಬಂದಾಗ ಪೊಲೀಸ್ ಪೇದೆ ಗುರುತಿಸಿ ಅವರನ್ನು ಹಿಡಿಯುತ್ತಾನೆ. ಈ ಸುದ್ದಿ ಊರಿನಲ್ಲಿ ವ್ಯಾಪಿಸುತ್ತದೆ. ತಕ್ಷಣ ಕಾರ್ಯಪ್ರವೃತ್ತರಾದ ಹೋರಾಟಗಾರ ಜಾವೂರ ಸಿದ್ದಪ್ಪ ಹಿಂಬಾಲಿಸಿಕೊಂಡು ಬಂದು ಕಬ್ಬಿಣದ ನೇಗಿಲಿನಿಂದ ಪೇದೆಯನ್ನು ಘಾಸಿಗೊಳಿಸಿ ಪ್ರಭುದೇವರನ್ನು ಹೊತ್ತುಕೊಂಡು ಹೋಗಿ ರಕ್ಷಣೆ ಮಾಡಿದ ಧೀರಕಥೆ ಈ ಭಾಗದಲ್ಲಿ ಇನ್ನೂ ಪ್ರಚಲಿತದಲ್ಲಿದೆ.

## ಭಾವಚಿತ್ರಕ್ಕೆ ಬೆಂಕಿ : ಬಂಧನ

ಬ್ರಿಟಿಷರ ಪರ ಕೆಲ ಭಾರತಿಯರು ಆಮಿಷಕ್ಕಾಗಿ ಕೆಲಸ ಮಾಡುವ ವಿಚಾರ ಹೋರಾಟಗಾರರಲ್ಲಿ ಅಸಹನೆ ಮೂಡಿಸಿರುತ್ತದೆ. ಇಂತಹ ಪ್ರಕರಣಕ್ಕೆ ಸಂಬಂಧಿಸಿದಂತೆ ಅರಸೀಕೆರೆಯಲ್ಲಿ ಆರ್ಕಾಟ್ ರಾಮಸ್ವಾಮಿ ಭಾವಚಿತ್ರ ಸುಟ್ಟು ತಾಲ್ಲೂಕು ಕಛೇರಿ ಮುಂದೆ ಸತ್ಯಾಗ್ರಹ ಮಾಡಿದಾಗ ಪ್ರಭುದೇವ್ ಅವರು ಪಾಲ್ಗೊಳ್ಳುತ್ತಾರೆ. ಕರಿಸಿದ್ದಪ್ಪ, ಹಾರ್ನಳ್ಳಿ ರಾಮಸ್ವಾಮಿಯವರೊಂದಿಗೆ ಪೊಲೀಸರು ದಸ್ತಗಿರಿ ಮಾಡಿ ಹಾಸನ ಜೈಲಿನಲ್ಲಿ ಬಂಧಿಸಿ ನಂತರ ಬಿಡುಗಡೆ ಮಾಡುತ್ತಾರೆ. ಕಾಗೋಡು ಸತ್ಯಾಗ್ರಹದಲ್ಲೂ ಪಾಲ್ಗೊಂಡಿದ್ದ ಪ್ರಭುದೇವ್ ಚಿಕ್ಕಮಗಳೂರು ಜಿಲ್ಲೆಯ ಪ್ರಥಮ ವಾರಪತ್ರಿಕೆ 'ಗರ್ಜನೆ' ಹೊರತಂದ ಹೆಗ್ಗಳಿಕೆಗೆ ಪಾತ್ರರಾದವರು.

ದೇಶದ ಅಗ್ರ ಹೋರಾಟಗಾರ ಟಿ. ಸುಬ್ರಹ್ಮಣ್ಯಂ ಜೊತೆಯಲ್ಲಿ ಗ್ರಾಮಾಂತರ ಪ್ರದೇಶದ ಚಳುವಳಿಗೆ ಶ್ರಮಿಸುತ್ತಿದ್ದವರು ಭೂಗತ ಹೋರಾಟಗಾರ ಕೆ.ಜಿ.ಸಿದ್ದಪ್ಪ. ೧೯೪೮ರಲ್ಲಿ ದಾವಣಗೆರೆಯಲ್ಲಿ ಪೊಲೀಸ್ ಠಾಣೆಯ ಮೇಲೆ ಧಾಳಿ ನಡೆಸಿದ ಸಂದರ್ಭದಲ್ಲಿ ಪೆಟ್ಟು ತಿಂದು ಬಂಕನಕಟ್ಟೆಯಲ್ಲಿ ಅಡಗಿ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ ಕಲಿ ಅಜ್ಜಂಪುರದವರು.

## ಹೆಬ್ಬೂರಿನಲ್ಲಿ ರೈಲುತಡೆ

ಶಾಲಾ ಮಕ್ಕಳಿಂದಾಗಿ ಸಮೀಪದ ಹಳ್ಳಿಗಳಿಗೂ ಹೋರಾಟದ ಗಾಳಿ ಬೀಸುತ್ತದೆ. ವಿಶೇಷವಾಗಿ ಹೆಬ್ಬೂರು ಕೇಂದ್ರವಾಗಿಸಿಕೊಂಡು ಬಂಕನಕಟ್ಟೆ, ಮೆಣಸಿನಕಾಯಿ ಹೊಸಳ್ಳಿ, ಹಾಡಿಗೆರೆ ಸುತ್ತಮುತ್ತಲಿನ ಹುಡುಗರನ್ನು ಒಟ್ಟುಗೂಡಿಸಿ ಶೆಟ್ರು ಸಿದ್ದಪ್ಪನವರು ಪ್ರಭಾತ್‌ಪೇರಿ ನಡೆಸುತ್ತಿದ್ದರು. ಹೆಬ್ಬೂರಿನ ಮೂಲಕ ರೈಲ್ವೆ ಹಳಿ ಹಾದುಹೋಗಿದ್ದು ಆಗಾಗ ಇಲ್ಲಿ ರೈಲು ತಡೆದು ಘೋಷಣೆ ಕೂಗಿ ಕಾನೂನುಭಂಗ ಮಾಡಲಾಗುತ್ತಿತ್ತು. ಹುಡುಗರೊಂದಿಗೆ ಒಂದೆರಡು ಬಾರಿ ತಾವೂ ಭಾಗವಹಿಸಿದ್ದು ಗಾಂಧೀಗೆ ಜಯಕಾರ, ಭಾರತಮಾತೆಗೆ ಜಯಘೋಷ ಮೊಳಗಿಸಿದ್ದನ್ನು ಇಳಿವಯಸ್ಸಿನಲ್ಲಿ ನೆನಪಿಸಿಕೊಂಡು ಮೆಣಸಿನಕಾಯಿ ಹೊಸಳ್ಳಿಯ ಎಂ.ಎಸ್.ಚನ್ನವೀರಪ್ಪ ಹೇಳುತ್ತಿದ್ದರು.

ಕೂಲಿ ಕೆಲಸ ಮಾಡುವ ಕುಟುಂಬದಲ್ಲಿ ಹುಟ್ಟಿದ ಸಿದ್ದಪ್ಪ ೧೯ರ ಪ್ರಾಯದಲ್ಲಿ ಸ್ವಾತಂತ್ರ್ಯ ಹೋರಾಟದ ಚಳುವಳಿಗೆ ಪಾದಯಾತ್ರೆ ಮಾಡಿ ಜನರನ್ನು ಸಂಘಟಿಸುತ್ತಿದ್ದರು. ಭದ್ರಾವತಿಯ ರಂಗಪ್ಪ ಸರ್ಕಲ್‌ನಲ್ಲಿ ಧರಣಿ ನಡೆಸುತ್ತಿದ್ದಾಗ ಬ್ರಿಟಿಷ್ ಸರ್ಕಾರದ ಪೊಲೀಸರು ಗುಂಡು ಹಾರಿಸಿ ಬಂಧಿಸಿದ ತಂಡದಲ್ಲಿ ಸಿದ್ದಪ್ಪ ಇದ್ದರು. ಓರ್ವ ಹೆಣ್ಣುಮಗಳು ಜೀವತೆತ್ತ ಪ್ರಕರಣವನ್ನು ನೊಂದು ಸ್ಮರಿಸುವ ಸಿದ್ದಪ್ಪ, ೧೯೪೭ರ ಭಾರೀ ಪಿಕೆಟಿಂಗ್‌ನಲ್ಲಿ ಪಾಲ್ಗೊಂಡು ತರೀಕೆರೆ ತಾಲ್ಲೂಕು ಕಚೇರಿಯ ಮೇಲೆ ಬಾವುಟ ಹಾರಿಸಿ ಜಯಕಾರ ಹಾಕಿದ ಸಾಹಸಿಗ.

ಎಸ್.ಸಿದ್ದಲಿಂಗಪ್ಪ ೧೯೪೨ರ ಹೋರಾಟದಲ್ಲಿ ತೊಡಗಿಸಿಕೊಂಡವರು. ನರಸಿಂಹರಾಜಪುರ ನ್ಯಾಯಾಲಯಕ್ಕೂ ಹಾಜರುಪಡಿಸಿ ಅಲ್ಲಿಯ ಉಪ ಕಾರಾಗೃಹದಲ್ಲಿ ಹತ್ತು ದಿನ ಬಂಧನಕ್ಕೊಳಗಾದವರು. ಸ್ವಂತ ವ್ಯವಹಾರದಲ್ಲಿ ತೊಡಗಿದರೂ ವಿನಾಕಾರಣ ಅಜ್ಜಂಪುರ ಪೊಲೀಸರು ದಸ್ತಗಿರಿ ಮಾಡಿ ಚಿಕ್ಕಮಗಳೂರು ಪೊಲೀಸರ ವಶದಲ್ಲಿ ಕೆಲಕಾಲ ಇಟ್ಟುಕೊಂಡಿದ್ದರೆಂದು ನೆನಪಿಸಿಕೊಳ್ಳುತ್ತಾರೆ.

## ಯರವಾಡ ಜೈಲಿನಲ್ಲಿ ಶಿವನಿ ಯೋಧ

ಶಿವನಿ ಗ್ರಾಮದಲ್ಲಿ ೧೯೦೭ರಲ್ಲಿ ಜನಿಸಿದ ಚಂದ್ರಶೇಖರಯ್ಯ ಬಾಲ್ಯದಲ್ಲೇ ಅಕ್ಷರಜ್ಞಾನ ಪಡೆದವರು. ತಾರುಣ್ಯದಲ್ಲಿ ಹೋರಾಟದ ಕಣಕ್ಕೆ ಧುಮುಕಿದವರು.



ಬ್ರಿಟಿಷ್ ಸರ್ಕಾರದ ವಿರುದ್ಧ ಜನಜಾಗೃತಿಗೊಳಿಸುತ್ತಿದ್ದವರು. ಕಾನೂನುಭಂಗದ ಅಪರಾಧಕ್ಕಾಗಿ ೧೯೪೦ರಲ್ಲಿ ಮೂರು ತಿಂಗಳು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಸೆರೆಯಾಗಿದ್ದವರು. 'ಕ್ವಿಟ್ ಇಂಡಿಯಾ ಚಳುವಳಿ'ಯಲ್ಲಿ ಬಂಧಿಸಲ್ಪಟ್ಟು ೬ ತಿಂಗಳು ಪೂನಾದ ಯರವಾಡ ಜೈಲಿನಲ್ಲಿ ಡಾ.ಎಚ್.ನರಸಿಂಹಯ್ಯ ಅವರೊಂದಿಗೆ ಸೆರೆವಾಸ ಅನುಭವಿಸಿದವರು. ಸ್ವಾತಂತ್ರ್ಯಾನಂತರ ಕಡೂರು ವಿಧಾನಸಭಾ ಕ್ಷೇತ್ರದ ಪ್ರಥಮ ಶಾಸಕರಾಗಿ ಆಯ್ಕೆಗೊಂಡವರು.

## ಜೈಲಿನಲ್ಲೂ ನೆಂಟರ ಮನೆಯೂಟ

ಈಗಲೂ ಬದುಕಿರುವ ಹೋರಾಟಗಾರ ಬಿ.ಎನ್.ಏಕೋರಾಮಸ್ವಾಮಿ ವಿದ್ಯಾರ್ಥಿಯಾಗಿದ್ದಾಗ ಪ್ರಭಾತ್‌ಪೇರಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾಗಿ ನರಸಿಂಹರಾಜಪುರ ಜೈಲಿನಲ್ಲಿದ್ದವರು. ಬಂಧುಗಳಾದ ನಿರ್ವಾಣಪ್ಪಶೆಟ್ಟರ ಮನೆಯಿಂದ ಜೈಲಿನಲ್ಲಿದ್ದ ತಮ್ಮ ತಂಡದ ಐವರಿಗೆ ಐದು ದಿನವೂ ಊಟೋಪಚಾರ, ವಿಶೇಷ ಆತಿಥ್ಯ ಲಭ್ಯವಾಗಿದ್ದನ್ನು ನೆನಪು ಮಾಡಿಕೊಳ್ಳುತ್ತಾರೆ.

ಚನ್ನಗಿರಿಯಲ್ಲಿ ಸೇಂದಿ ಅಂಗಡಿಗೆ ಬೆಂಕಿಹಚ್ಚಿ, ತಾಲ್ಲೂಕು ಕಚೇರಿಯ ಮೇಲೆ ರಾಷ್ಟ್ರಧ್ವಜ ಹಾರಿಸಿದ ತಂಡದಲ್ಲಿ ಪೊಲೀಸರ ಸೆರೆಯಾದರೂ ಚಳ್ಳೆಹಣ್ಣು ತಿನ್ನಿಸಿ ತಪ್ಪಿಸಿಕೊಂಡು ಸೇತುವೆ ಕೆಳಗೆ ಅವಿತುಕೊಂಡದ್ದನ್ನು ಸ್ವಾರಸ್ಯಕರವಾಗಿ ವಿವರಿಸುವ ಏಕೋರಾಮಸ್ವಾಮಿ, ಬುಕ್ಕಾಂಬುಧಿ ಸೇರಿದ್ದನ್ನು ಮೆಲುಕು ಹಾಕುತ್ತಾರೆ. ೨೦೨೧ರ ಅಗಸ್ಟ್ ೧೫ರಂದು ಅಮೃತ ಮಹೋತ್ಸವದ ಸ್ಮರಣೆಗಾಗಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಅಜ್ಜಂಪುರದ ಮನೆಗೆ ತೆರಳಿ ಸನ್ಮಾನಿಸಿ ಗೌರವ ಸಮರ್ಪಿಸಿದರು.

## ಹೋರಾಟದ ಕತೆ ಹೇಳುವ ಸಿದ್ದಪ್ಪ

ಅಜ್ಜಂಪುರದಲ್ಲಿ ಸುಬ್ರಹ್ಮಣ್ಯಶೆಟ್ಟರ ಜೊತೆಯಲ್ಲಿ ಚಳುವಳಿಯಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿ ಲಾಠಿ ಪೆಟ್ಟು ತಿಂದು ಹೋರಾಟ ಮಾಡಿದ ಕೇರಿಯವಾಸಿ ಸಿದ್ದಪ್ಪ ಶತಮಾನದ ಅಂಚಿನಲ್ಲಿ ನಿತ್ರಾಣಗೊಂಡು ಮನೆಯಲ್ಲಿ ಹಾಸಿಗೆ ಹಿಡಿದಿದ್ದಾರೆ. ಹಲ್ಲುಗಳೆಲ್ಲ ಉದುರಿ, ಬೆನ್ನುಬಾಗಿ, ಕಣ್ಣು–ಕಿವಿ ಮಂಕಾಗಿರುವ ಸಿದ್ದಪ್ಪರನ್ನು ಸ್ವಾತಂತ್ರ್ಯ ಹೋರಾಟದ ವಿಚಾರದತ್ತ ಗಮನ

ಸೆಳೆದರೆ ಕಷ್ಟದಲ್ಲೇ ಎದ್ದುಕೂತು ಉತ್ಸಾಹದಿಂದ ಬಿಡಿ ಬಿಡಿ ಪದಗಳನ್ನು ಹೇಳುತ್ತಾರೆ. ಅಜ್ಜಂಪುರದಲ್ಲಿ ನಡೆದ ಹೋರಾಟದ ಕತೆ ಹೇಳುವಾಗ ಹಿರಿಯ ಜೀವದ ಕಣ್ಣುಗಳು ನಕ್ಷತ್ರದಂತೆ ಮಿನುಗಿದವು. ಜೀವನದ ತಾರುಣ್ಯವನ್ನು ದೇಶಕ್ಕಾಗಿ ಅರ್ಪಿಸಿದ ಹಿರಿಯರು ಕೆಲವರಷ್ಟೇ ಈಗ ನಮ್ಮೊಡನೆ ಇದ್ದಾರೆ. ತಳ ಸಮುದಾಯದಿಂದ ಬಂದ ಸಿದ್ದಪ್ಪನವರು, ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ತ್ಯಾಗ ಅಪಾರವಾದುದು.

## ಶಿವನಿ ಭೈರಪ್ಪ ಹೋರಾಟ

೧೯೨೧ರಲ್ಲಿ ಶಿವನಿಯಲ್ಲಿ ಜನಿಸಿದ ಟಿ.ಎಸ್. ಭೈರಪ್ಪ ಬಾಲ್ಯದಲ್ಲೇ ತಂದೆ–ತಾಯಿಯನ್ನು ಕಳೆದುಕೊಂಡು ಅನಾಥರಾದವರು. ತರೀಕೆರೆಯ ಸಂಬಂಧಿಕರ ಮನೆ ಸೇರಿ, ಶಾಲೆಗೂ ಸೇರಿದ. ಶಿವಮೊಗ್ಗದಿಂದ ಬರುತ್ತಿದ್ದ ಭೂಪಾಳಂ ಚಂದ್ರಶೇಖರಯ್ಯ ಹಾಗೂ ತರೀಕೆರೆಯ ಟಿ.ಸಿ.ಬಸಪ್ಪ ಅವರಿಂದ ಆಕರ್ಷಿತನಾಗಿ ಪ್ರಭಾತ್ ಪೇರಿಗಳಲ್ಲಿ ಪಾಲ್ಗೊಂಡು ಶಿಕ್ಷಕರ ಕಣ್ಣಿಗೆ ಬಿದ್ದು ಶಾಲೆಯಿಂದ ಹೊರಹಾಕಲ್ಪಟ್ಟವರು. ಹೋರಾಟಗಾರರ ಜೊತೆ ಸೇರಿ ಹಲವು ಚಳುವಳಿಗಳಲ್ಲಿ ತೊಡಗಿಸಿಕೊಂಡವರು. ೧೯೩೭ರಲ್ಲಿ ಗಂಧದ ಮರ ನಾಶಮಾಡುವ ಮೂಲಕ ಬ್ರಿಟಿಷ್ ಸರ್ಕಾರಕ್ಕೆ ಎಚ್ಚರಿಕೆ ನೀಡುವ ಕಾರ್ಯ ನಡೆಯುತ್ತದೆ. ಗಂಧದ ಮರ ಕಡಿಯುವ ಗುಂಪಿನೊಂದಿಗೆ ಸೇರಿ ಹಂಜಿ ಶಿವಣ್ಣನವರ ಮನೆಯಿಂದ ಸೀಮೆಎಣ್ಣೆ ಒಯ್ಯುವಾಗ ಪೊಲೀಸರ ಕೈಗೆ ಸಿಕ್ಕು ಬಲವಾದ ಲಾಠಿ ಪೆಟ್ಟು ತಿಂದರು. ಸ್ಥಳೀಯ ಪ್ರಭಾವಿ ತರುಣ ಎಲ್.ಬಿ. ಶಿವಾನಂದಪ್ಪ ಚಿತ್ರದುರ್ಗ ಕಾಲೇಜಿನಿಂದ ವಾಪಸ್ಸು ಬಂದು ತಾಲ್ಲೂಕಿನಲ್ಲಿ ಚಳುವಳಿ ಆರಂಭಿಸಿದಾಗ ಅವರೊಂದಿಗೆ ಭೈರಪ್ಪ ಕೈಜೋಡಿಸುತ್ತಾರೆ. ೧೯೪೫ರಲ್ಲಿ ಕೋರ್ಟ್ ಸೀಜ್ ಆದಾಗ ತಾಲ್ಲೂಕು ಕಚೇರಿಯ ಮೇಲೆ ತ್ರಿವರ್ಣ ಧ್ವಜ ಹಾರಿಸಿದ ಧೀರ. ಗಾಂಧೀಜಿ, ವಿನೋಬಾ ಭಾವೆ ಅವರನ್ನು ಕಂಡು ಆಶೀರ್ವಾದ ಪಡೆದು, ಹೋರಾಟವನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ದರು.

ವಿವಿಧ ಹೋರಾಟಗಳಲ್ಲಿ ತೊಡಗಿಸಿಕೊಂಡು ೧೯೪೫ ಮತ್ತು ೧೯೪೭ ರಲ್ಲಿ ಎರಡು ಬಾರಿ ನರಸಿಂಹರಾಜಪುರ ಜೈಲಿನಲ್ಲಿ ಬಂಧಿಯಾಗಿದ್ದವರು.



ಸ್ವಾತಂತ್ರ್ಯ ಘೋಷಣೆಯಾದ ನಂತರ ಬಿಡುಗಡೆಗೊಂಡು ಶಿವನಿಯಲ್ಲಿ ಸಂಭ್ರಮ ಆಚರಿಸಿದವರು.

## ರಾಷ್ಟ್ರೀಯ ಅಧಿವೇಶನಗಳಲ್ಲಿ ಸ್ವಯಂ ಸೇವಕ

ಅಜ್ಜಂಪುರದ ಪಿ.ಕೆ.ಗಣೇಶರಾವ್ ಹುಟ್ಟು ದೇಶಪ್ರೇಮಿ ಎನ್ನಬಹುದು. ೧೯೩೯ರ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಿ ಪ್ರೇರಣೆ ಪಡೆದವರು. ೧೯೪೨ರ ಬೆಂಗಳೂರಿನ ಅಧಿವೇಶನದಲ್ಲೂ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿ ದೇಶಭಕ್ತಿ ಮೆರೆದವರು. ಅಜ್ಜಂಪುರದ ವಿವಿಧ ಹೋರಾಟಗಳಲ್ಲಿ ತೊಡಗಿಸಿಕೊಂಡು ಪೊಲೀಸರ ಕೆಂಗಣ್ಣಿಗೆ ಗುರಿಯಾದವರು. ದಾವಣಗೆರೆಯ ಹೋರಾಟವೊಂದರಲ್ಲಿ ಸಿಕ್ಕಿ ಹಾಕಿಕೊಂಡು ಪರಿತಪಿಸಿದವರು.

## ತೀವ್ರವಾದಿ ಹೋರಾಟಗಾರರಿಗೂ ಆಸರೆ

ಅಜ್ಜಂಪುರದ ಕಲಿಗಳು ಬೇರೆಡೆಯ ಹೋರಾಟದಲ್ಲಿ ಪಾಲ್ಗೊಂಡು ಆಶ್ರಯ ಪಡೆದಂತೆ ಇತರೆಡೆಯ ಹೋರಾಟಗಾರರಿಗೆ ಆಸರೆಯಾಗಿದ್ದು ಸುಳ್ಳಲ್ಲ. ಸಮೀಪದ ಚಿಕ್ಕನಲ್ಲೂರಿನಲ್ಲಿ ನೆಲೆನಿಂತ ಕುಟುಂಬದ ಚಿನ್ನ, ಬೆಳ್ಳಿ ಕೆಲಸ ಮಾಡುವ ಶಿಲ್ಪಿಗಳ ತವರು ಹೊಸದುರ್ಗ ತಾಲ್ಲೂಕಿನ ಕೈನೂರು. ಯುವ ಶಿಲ್ಪಿಗಳಾದ ಭಾಸ್ಕರಾಚಾರ್ ಮತ್ತು ಸೂರಾಚಾರ್ ಅಪ್ಪಟ ದೇಶಭಕ್ತರು. 'ಗಾಂಧೀ ಮಾರ್ಗದಿಂದ ಪ್ರಯೋಜನವಿಲ್ಲ. ಬ್ರಿಟಿಷರಿಗೆ ಅವರದೇ ಭಾಷೆಯಲ್ಲಿ ಪ್ರತ್ಯುತ್ತರ ನೀಡಬೇಕು' ಎಂದು ಬಲವಾಗಿ ನಂಬಿದವರು. ತೀವ್ರವಾದಿಗಳ ಗುಂಪೊಂದನ್ನು ಕಟ್ಟಿಕೊಂಡು ಬ್ರಿಟಿಷ್ ಅಧಿಕಾರಿಗಳು ಮತ್ತು ಪೊಲೀಸರ ಮೇಲೆರಗುವ, ಹಿಮ್ಮೆಟ್ಟಿಸುವ ಕಾರ್ಯದಲ್ಲಿ ತೊಡಗಿಸಿಕೊಂಡವರು. ಶಸ್ತ್ರಾಸ್ತ್ರ ಹಿಡಿದು ಹೋರಾಡಬೇಕೆಂದು ಪ್ರತಿಪಾದಿಸುತ್ತ ಬಾಂಬ್‌ಸ್ಫೋಟದಲ್ಲಿ ಪರಿಣಿತರೂ ಆಗಿದ್ದವರು. ಬಂದೂಕುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು. ಚಿತ್ರದುರ್ಗ ಜಿಲ್ಲೆಯ ವಿವಿಧೆಡೆ ಬಾಂಬ್ ಸ್ಫೋಟಿಸಿದರು. ಬಂದೂಕು ಅಪರಾಧಗಳ ಜೊತೆಗೆ ಕಾನೂನುಭಂಗದ ಉಗ್ರ ಹೋರಾಟ ಬ್ರಿಟಿಷರಿಗೆ ತಲೆಬೇನೆಯಾಗಿತ್ತು.

ಸಹೋದರರಿಗೆ ನಿಜಲಿಂಗಪ್ಪನವರ ಆಸರೆ ದೊರೆಯಿತು. ಬಂದೂಕಿನ ಹಿನ್ನೆಲೆ ಹುಡುಕಿ ಹೊರಟ ಪೊಲೀಸರು ಅವರನ್ನು ಪತ್ತೆಹಚ್ಚಿ ಬಂಧಿಸುತ್ತಾರೆ.

ಚಿತ್ರದುರ್ಗದಲ್ಲಿ ಜೈಲುವಾಸ ಅನುಭವಿಸುತ್ತಿದ್ದ ಸಂದರ್ಭದಲ್ಲಿ ಅವರು ಸುಂದರವಾದ ಗಣೇಶನ ವಿಗ್ರಹವನ್ನು ಕೆತ್ತಿದ್ದರು. ಬಲ್ಲಾಳ ಸಮುದ್ರದ ರೆಡ್ಡಿಗಳ ಭದ್ರಕೋಟೆ ಈ ಸಹೋದರರ ಕಾರ್ಯಸ್ಥಾನವಾಗಿತ್ತು. ಇಬ್ಬರು ಯುವಕರ ಮೇಲೆ ಗಡಿಪಾರು ಆದೇಶ ನೀಡಿದರೂ ಬ್ರಿಟಿಷರಿಗೆ ಅವರ ಉಪಟಳ ನಿಲ್ಲಲಿಲ್ಲ. ಕೊನೆಗೆ ಅವರಿಗೆ ಕಂಡಲ್ಲಿ ಗುಂಡಿಕ್ಕುವಂತೆ ಹೊರಡಿಸಿದ ಗುಪ್ತ ಸಂದೇಶ ಪೊಲೀಸರ ಕಡೆಯಿಂದಲೇ ಬಹಿರಂಗವಾಗುತ್ತದೆ.

೧೯೪೭ರ ಆಗಸ್ಟ್ ದಿನಗಳಲ್ಲಿ ಪೊಲೀಸರ ಹದ್ದಿನ ಕಣ್ಣನ್ನು ತಪ್ಪಿಸಿ ಕಾರ್ಯನಿರ್ವಹಿಸುವುದು ಕಠಿಣವೆಂದು ಅರಿತ ಭಾಸ್ಕರಾಚಾರ್ ಮತ್ತು ಸೂರಾಚಾರ್ ತಮ್ಮ ಅಕ್ಕ ಚಿಕ್ಕನಲ್ಲೂರಿನ ಗಂಗಮ್ಮರನ್ನು ನೆನಪಿಸಿಕೊಳ್ಳುತ್ತಾರೆ. ರಾತ್ರಿ ವೇಷ ಮರೆಸಿಕೊಂಡು ಕಾಲುಹಾದಿಯ ಮೂಲಕ ಅಜ್ಜಂಪುರ ಹಾದು ಚಿಕ್ಕನಲ್ಲೂರಿನ ಅಕ್ಕನಮನೆಗೆ ಬೆಳಗಿನ ಜಾವ ಬಂದು ಆಶ್ರಯ ಪಡೆದು ಸ್ವಲ್ಪ ವಿಶ್ರಮಿಸುತ್ತಾರೆ. ಭಾವನ ಮನೆಯವರೊಂದಿಗೆ ಸಮಾಲೋಚನೆ ನಡೆಸಿ ಅವರೊಂದಿಗೆ ರಾತ್ರೋ ರಾತ್ರಿ ಕಾಲ್ನಡಿಗೆಯಲ್ಲೇ ಚಿಕ್ಕಮಗಳೂರನ್ನು ತಲುಪುತ್ತಾರೆ. ಬೆಳಕು ಹರಿಯುತ್ತಿದ್ದಂತೆ ಅಲ್ಲಿಂದ ಮಂಗಳೂರು ಬಸ್ ಹತ್ತಿ ಪ್ರಯಾಣ ಬೆಳೆಸುತ್ತಾರೆ. ಮಂಗಳೂರಿನಲ್ಲಿ ಸಮಾನ ಮನಸ್ಕರನ್ನು ಭೇಟಿಮಾಡಿ ಸಮಾಲೋಚನೆ ನಡೆಸುವ ದಿನಗಳಲ್ಲೇ ಬ್ರಿಟಿಷರು ದೇಶಬಿಟ್ಟು ಹೋಗುವ ಪ್ರಕಟಣೆ ಹೊರಬೀಳುತ್ತದೆ. ಆಗ ಇವರು ಊರಿಗೆ ಹಿಂತಿರುಗುವ ನಿರ್ಧಾರ ಮಾಡುತ್ತಾರೆ.

ಆಗಸ್ಟ್ ೧೭ರಂದು ಚಿಕ್ಕನಲ್ಲೂರಿಗೆ ಹಿಂತಿರುಗಿದ ಸಹೋದರರು ಜನರನ್ನು ಸೇರಿಸಿ ರಾಷ್ಟ್ರಧ್ವಜ ಹಾರಿಸಿ ಸ್ವಾತಂತ್ರ್ಯೋತ್ಸವ ಸಂಭ್ರಮಿಸುತ್ತಾರೆ. ಭಾರತ ಸ್ವಾತಂತ್ರ್ಯ ಪಡೆದ ಸವಿನೆನಪಿಗಾಗಿ ಊರಿನ ಶ್ರೀ ಕಲ್ಲೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಎರಡು ತೆಂಗಿನ ಸಸಿ ನೆಟ್ಟಿದ್ದರು. (ಇತ್ತೀಚಿಗೆ ಅಭಿವೃದ್ಧಿಕಾರ್ಯಕ್ಕಾಗಿ ಮರ ಕಡಿಯಲಾಗಿದೆ) ಆದರೆ ಶ್ರೀ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಎರಡು ತೆಂಗಿನಮರ ನೆಟ್ಟಿರುವುದು ಇಂದೂ ನೋಡಬಹುದೆಂದು ಸೋದರಳಿಯ ಅಜ್ಜಂಪುರದ ನಕಾಶೆ ಶಿಲ್ಪಿ ವಿನೋದಾಚಾರ್ ಹೆಮ್ಮೆಯಿಂದ ಹಳೆಯ ಘಟನಾವಳಿಗಳನ್ನೆಲ್ಲ ಕಣ್ಣಿಗೆ ಕಟ್ಟಿದಂತೆ ವಿವರಿಸುತ್ತಾರೆ.

ಭಾಸ್ಕರಾಚಾರ್ ಸಹೋದರರು ಅಜ್ಜಂಪುರ, ಸೊಲ್ಲಾಪುರ, ತಮಟದಹಳ್ಳಿ ಮತ್ತಿತರ ಗ್ರಾಮಗಳಲ್ಲೂ ಸ್ವಾತಂತ್ರ್ಯೋತ್ಸವ ಆಚರಿಸಿ ಸಿಹಿ ಹಂಚಿ ಧ್ವಜಾರೋಹಣ



ಮಾಡಿ, ಸಭೆಗಳನ್ನು ನಡೆಸುತ್ತಾ ಹೊಸದುರ್ಗದ ಕೈನೂರಕ್ಕೆ ಹಿಂತಿರುಗುತ್ತಾರೆ. ದಶಕದ ಹಿಂದೆ ಅವರ ಮನೆಯ ಮಣ್ಣಿನ ಗೋಡೆ ಮಳೆಯಿಂದ ಕುಸಿದಾಗ ಅದರೊಳಗೆ ನಾಲ್ಕೈದು ಹಳೆಯ ಬಂದೂಕುಗಳು ಸಿಕ್ಕು ಸುದ್ದಿಯಾದದ್ದನ್ನೂ ನೆನಪಿಸಿಕೊಳ್ಳುತ್ತಾರೆ.

## ಅಜ್ಜಂಪುರದಲ್ಲಿ ಸೇವಾದಳ

ಅಜ್ಜಂಪುರದ ಶ್ರೀ ಶಂಕರಾನಂದ ಸ್ವಾಮೀಜಿ ಆಶ್ರಯದಲ್ಲಿ ೭ ನೆಯ ತರಗತಿಯವರೆಗೆ ವ್ಯಾಸಂಗ ಮಾಡಿದ ಗವಿರಂಗಪ್ಪನವರ ಪುತ್ರ ಹನುಮಂತಪ್ಪ ಬಿಡುವಿನ ವೇಳೆಯಲ್ಲಿ ಚರಕದಿಂದ ನೂಲು ತೆಗೆಯಲು ಖಾದಿ ಕೇಂದ್ರಕ್ಕೆ ಹೋಗುತ್ತಿದ್ದವರು. ಅಜ್ಜಂಪುರ ಅವರಿಗೆ ತಾಯಿಯ ತವರೂರು. ಅಲ್ಲಿಂದ ಸೇವಾದಳದ ಸಂಪರ್ಕ ಪಡೆದು ಲ.ಭ.ಸಿದ್ಧಪ್ಪನವರ ಮುಖಂಡತ್ವದಲ್ಲಿ ನಡೆದ ಸೇವಾದಳ ಶಿಬಿರದಲ್ಲಿ ತರಬೇತಿ ಹೊಂದಿದರು. ಬೆಂಗಳೂರಿನಲ್ಲಿ ೧೫ ದಿನಗಳ ಕಾಲ ಹಿಂದೂಸ್ಥಾನಿ ಸೇವಾದಳ ಸಂಸ್ಥಾಪಕ ಡಾ.ನಾ.ಸು.ಹರ್ಡೀಕರ್ ಮತ್ತು ದಳಪತಿ ರಾಮರಾವ್ ಮುಖಂಡತ್ವದ ಸೇವಾದಳ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಅದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನಡೆಯುತ್ತಿದ್ದ ಸತ್ಯಾಗ್ರಹದಲ್ಲೂ ಹಿಂಬಾಲಕರಾಗಿ ಪಾಲ್ಗೊಳ್ಳುತ್ತಾರೆ. ಅಜ್ಜಂಪುರಕ್ಕೆ ಹಿಂತಿರುಗಿ ಕಾನೂನುಭಂಗ ಕೃತ್ಯಗಳಲ್ಲಿ ತೊಡಗುತ್ತಾರೆ.

## ಮೈಸೂರು ಏಕೀಕರಣ

೧೯೪೭ರ ಸೆಪ್ಟಂಬರ್ ೪ರಂದು ಬೆಂಗಳೂರಿನ ಕಾಂಗ್ರೆಸ್ ಕಚೇರಿಯಿಂದ ಕೆ.ಚೆಂಗಲರಾಯರೆಡ್ಡಿ ಮುಂದಾಳತ್ವದಲ್ಲಿ ಕಾಲ್ನಡಿಗೆಯ ಮೂಲಕ ಮೈಸೂರಿಗೆ ತೆರಳಿ ಅರಮನೆಯ ಮುಂದೆ ಸತ್ಯಾಗ್ರಹ ನಡೆಸುವ ಕರೆಗೆ ಸ್ಪಂದಿಸಿದ ಹನುಮಂತಪ್ಪ ಅಜ್ಜಂಪುರದಿಂದ ಹದಿಮೂರು ಯುವ ಸ್ನೇಹಿತರೊಂದಿಗೆ ರಾತ್ರಿ ಮೇಲ್ ರೈಲಿನಲ್ಲಿ ಪ್ರತಿಭಟನಾರ್ಥವಾಗಿ ಟಿಕೆಟ್ ಪಡೆಯದೆ ಪ್ರಯಾಣಿಸುತ್ತಾರೆ. ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಒಟ್ಟಾಗಿ ಇಳಿದ ತಂಡವನ್ನು ಗುರುತಿಸಿದ ರೈಲ್ವೆ ಪೊಲೀಸರು ಅವರನ್ನೆಲ್ಲ ಬಂಧಿಸುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ಹನ್ನೆರಡು ಜನರಿಗೆ ಏಳು ದಿನಗಳ ಸಾದಾ ಶಿಕ್ಷೆ ವಿಧಿಸಿದ್ದು, ಶಿಕ್ಷೆಯ ಅವಧಿ ಪೂರ್ಣಗೊಳಿಸಿದ ನಂತರ ಹಿಂತಿರುಗಿದ ಹನುಮಂತಪ್ಪ

ತಂಡಕ್ಕೆ ಅಜ್ಜಂಪುರದಲ್ಲಿ ಭವ್ಯ ಸ್ವಾಗತವೇ ಸಿಕ್ಕಿತು.

## ಖಾದಿ ಕೇಂದ್ರದಿಂದ ಪ್ರೇರಣೆ

ಅಜ್ಜಂಪುರ ಖಾದಿ ಕೇಂದ್ರದ ಮೂಲಕ ಗಾಂಧಿ ತತ್ತ್ವಗಳ ಜೊತೆಗೆ ಸ್ವರಾಜ್ಯದ ಕಲ್ಪನೆಗಳನ್ನು ಬಿತ್ತುತ್ತಾ ಸುತ್ತಲ ಹತ್ತೆಂಟು ಹಳ್ಳಿಗಳಲ್ಲಿ ಪ್ರಚಾರ ನಡೆಸಿದ ಜಿ.ಕೆ.ಮಹಾದೇವಪ್ಪ ರೈತರಿಗೆ ಸ್ವಲ್ಪ ಆದಾಯದ ಗೀಳನ್ನು ಹತ್ತಿಸುತ್ತಾರೆ. ಮೈಸೂರಿನಲ್ಲಿ ಓದುತ್ತಿದ್ದಾಗ ಮಹಾತ್ಮ ಗಾಂಧಿ ಅವರನ್ನು ನೋಡಿ ಪ್ರೇರಿತರಾಗಿ ಖಾದಿ ಧರಿಸುವ ವ್ರತವನ್ನು ಜೀವನದ ವ್ರತವಾಗಿ ಪಾಲಿಸಿದವರು.

ಸೇವಾದಳದ ಮೂಲಕವೂ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಿದ್ದ ಅವರು, ಗೆಜ್ಜಗೊಂಡನಹಳ್ಳಿಯಲ್ಲಿ ಎರಡು ಬಾರಿ ಸೇವಾದಳ ಶಿಬಿರ ಏರ್ಪಡಿಸಿ ದೇಶಭಕ್ತಿಯ ತರಬೇತಿ ನೀಡುತ್ತಾರೆ. ಮೈಸೂರು ಅರಮನೆಯ ಮೇಲೆ ಬಾವುಟ ಹಾರಿಸುವ ಕರೆಗೆ ಓಗೊಟ್ಟು ಅಜ್ಜಂಪುರದಿಂದ ತರೀಕೆರೆ ತಲುಪಿ ಟಿ.ಸಿ.ಬಸಪ್ಪ ಅವರ ನಾಯಕತ್ವದ ಸತ್ಯಾಗ್ರಹಿಗಳ ತಂಡ ಸೇರಿ ಕಡೂರಿಗೆ ಕಾಲ್ನಡಿಗೆಯಲ್ಲೇ ಸಾಗಿ ತಾಲ್ಲೂಕು ಕಚೇರಿಯಲ್ಲಿ ತ್ರಿವರ್ಣಧ್ವಜ ಹಾರಿಸಿದ ತಂಡದಲ್ಲಿದ್ದವರು.

ಅಜ್ಜಂಪುರದ ಹೋರಾಟಕ್ಕೆ ಚಿಕ್ಕಮಗಳೂರು ಜಿಲ್ಲೆಯ ಅನೇಕ ಮುಖಂಡರು ಪ್ರೇರಣೆ ನೀಡುತ್ತಿದ್ದರು. ಅವರ ಪೈಕಿ ಹೊಸಕೊಪ್ಪ ಕೃಷ್ಣರಾವ್, ತರೀಕೆರೆಯ ಹಂಜಿ ಶಿವಣ್ಣ, ಚಿಕ್ಕಮಗಳೂರಿನ ಸಿ.ಎಂ.ಎಸ್.ಶಾಸ್ತ್ರಿ, ಎಸ್.ಅಣ್ಣಪ್ಪಶೆಟ್ಟಿ, ಶಿವಮೊಗ್ಗದ ಭೂಪಾಳಂ ಚಂದ್ರಶೇಖರಯ್ಯ, ಶಿಕಾರಿಪುರದ ಗುರುಶಾಂತಪ್ಪ ಪ್ರಮುಖರು.

## ಅಜ್ಜಂಪುರ ಶಿಲ್ಪಿಯಾದ ಯೋಧ ಸುಬ್ರಹ್ಮಣ್ಯ ಶೆಟ್ಟಿ

ಆಂಧ್ರ ಕಡೆಯಿಂದ ವಲಸೆ ಬಂದು ಹುಣಸಘಟ್ಟ ಆನಂತರ ಅಜ್ಜಂಪುರದಲ್ಲಿ ನೆಲೆ ಕಂಡ ಆರ್ಯವೈಶ್ಯ ಕುಟುಂಬ, ಕಿರಾಣಿ ಅಂಗಡಿ ನಡೆಸುತ್ತಾ ತುಂಬು ಕುಟುಂಬ ನಿರ್ವಹಿಸುತ್ತಿದ್ದ ತಂದೆಗೆ ನೆರವಾಗಲು ಶಾಲಾವಧಿ ಮುಗಿದ ನಂತರ ಬೀದಿಗಳಲ್ಲಿ ಬೋಂಡಾ–ಪಕೋಡ ಮಾರುತ್ತಿದ್ದ ಬಾಲಕ ಸುಬ್ರಹ್ಮಣ್ಯ ತ್ರಿವಿಕ್ರಮನಾಗಿ ರೂಪುಗೊಂಡ ಯಶೋಗಾಥೆ ಅಚ್ಚರಿ ಮೂಡಿಸುತ್ತದೆ.



ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ಎಳವೆಯಲ್ಲಿಯೇ ಚುರುಕಾದ ಹುಡುಗ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ತುಂಬು ಕುಟುಂಬದ ನೊಗಕ್ಕೆ ಹೆಗಲಾದ. ಮಹಾತ್ಮ ಗಾಂಧೀಜಿ ಅವರ ವಿಚಾರಗಳಿಂದ ವಿಶೇಷವಾಗಿ ಪ್ರೇರಣೆಗೊಳ್ಳುತ್ತಾನೆ. ಮುಂದೆ ಸ್ವಾತಂತ್ರ್ಯ ಹೋರಾಟವನ್ನು ಶೆಟ್ರುಸಿದ್ದಪ್ಪ ತಂಡದ ಜೊತೆಗೂಡಿ ಮುನ್ನಡೆಸಿ, ಅಜ್ಜಂಪುರದ ಪ್ರಾತಃಸ್ಮರಣೀಯ ವ್ಯಕ್ತಿಯಾಗಿ ಈಗ ಗೌರವಿಸಲ್ಪಡುತ್ತಿದ್ದಾರೆ.

೧೯೩೦ ದಶಕದಲ್ಲಿ ಸುತ್ತಮುತ್ತಲ ಹಳ್ಳಿಯಲ್ಲಿ, ಸಂಜೆ ಬಸ್‌ನಿಲ್ದಾಣದಲ್ಲಿ ವ್ಯಾಪಾರ ಮಾಡುತ್ತಾ ತಾರುಣ್ಯದಲ್ಲಿ ಸಿರಿವಂತ ಮಾವನ ಮಗಳನ್ನು ಮೆಚ್ಚುತ್ತಾನೆ. ಬೋಂಡಾ ಮಾರುವವನಿಗೆ ಮಗಳನ್ನು ಕೊಡುವುದಿಲ್ಲ ಎಂಬ ಮಾವನ ಮಾತಿನಿಂದ ಕೆರಳಿ ಮೆಚ್ಚಿದ ಹುಡುಗಿಯನ್ನು ಗಾಂಧರ್ವ ವಿವಾಹ ಆಗುವುದಾಗಿ ಬೆದರಿಕೆ ಹಾಕಿ ಕೊನೆಗೂ ಇಷ್ಟಪಟ್ಟ ರುಕ್ಮಿಣಿಯನ್ನೇ ವರಿಸಿ ಸಿರಿವಂತ–ಬಡವ ಭೇದ–ಭಾವ ಇರಬಾರದೆಂದು ನಿರೂಪಿಸಿದ ಸಾಹಸಿಗ ಸುಬ್ರಹ್ಮಣ್ಯ. ತಮ್ಮ ಮಕ್ಕಳಿಗೆ ಮೋಹನದಾಸ–ರಾಮನಾಥ ಎಂಬ ಹೆಸರನ್ನಿಟ್ಟು ಗಾಂಧೀಜಿಗೆ ಗೌರವ ಸಲ್ಲಿಸಿದವರು.

ಹೋರಾಟದ ಜೊತೆ ಜೊತೆಯಲ್ಲೇ ಸ್ವಾವಲಂಬನೆಯ ಬೀಜ ಬಿತ್ತಿದವರು. ಹೊರಗಡೆಯಿಂದ ತೆಂಗಿನ ಸಸಿ ತಂದು ತೋಟಮಾಡಿ ಆದರ್ಶ ಪ್ರಗತಿಪರ ಕೃಷಿಕ ಎನಿಸಿಕೊಂಡ ಸುಬ್ರಹ್ಮಣ್ಯ ಶೆಟ್ರು ಅಜ್ಜಂಪುರಕ್ಕೆ ಮೊಟ್ಟಮೊದಲು ರೇಡಿಯೋ, ಪತ್ರಿಕೆ ತರಿಸಿದವರು. ಪ್ರೌಢಶಾಲೆ, ವಿದ್ಯುಚ್ಛಕ್ತಿ, ಖಾದಿ ಕೇಂದ್ರ, ಚರಕ, ಪುರಸಭೆ, ಸಂತೆ, ದನದ ಜಾತ್ರೆ, ನಾಟಕೋತ್ಸವ, ಕಲಾಮಂದಿರ, ಕಲ್ಯಾಣಮಂಟಪ ತಂದವರು. ಭಗವದ್ಗೀತೆ ಪ್ರಸಾರ, ಆಶ್ರಮ ನಿರ್ಮಾಣ, ಸತ್ಸಂಗ, ಕಿರಾಳಮ್ಮ ಜಾತ್ರೆ..... ಇವುಗಳಲ್ಲೆಲ್ಲಾ ಶೆಟ್ಟರ ಪಾತ್ರ ಪ್ರಮುಖ. ಅಜ್ಜಂಪುರದ ಇಂದಿನ ರಸ್ತೆಗಳು, ಚರಂಡಿ, ಪುರಸಭಾ ಕಟ್ಟಡ ಅವರ ಹೆಸರು ಹೇಳುತ್ತಿವೆ. ಹರಿಕಥೆ, ಭಜನೆಗಳಿಗೆ ಹಿಮ್ಮೇಳ ಅಗತ್ಯವೆಂದು ಅರಿತು ತಾವೇ ಹಾರ್ಮೋನಿಯಂ ಕಲಿತವರು. ಸಂಗೀತ, ತಬಲ, ಪಿಟೀಲು ತರಬೇತಿ ಕೊಡಿಸಿದವರು. ಸಾಂಸ್ಕೃತಿಕತೆಯನ್ನು ಹೋರಾಟಕ್ಕೆ ಬಳಸಿಕೊಂಡ ಸಾಹಸಿಗ.

ತಮ್ಮ ಅಂಗಡಿಯ ಮೇಲಿನ ಮಹಡಿಯನ್ನು ಚಿಕ್ಕ ಕಲಾ ಕುಟೀರ ವಾಗಿಸಿದವರು. ಅತಿಥಿಗಳಿಗೆ ವಿಶ್ರಾಂತಿ, ಅಧಿಕಾರಿಗಳಿಗೆ ಸಮಾಲೋಚನಾ

ತಾಣ, ಸಣ್ಣಪುಟ್ಟ ವ್ಯಾಜ್ಯ ನಡೆದಾಗ ರಾಜಿ ಮಾಡಿ ಪೊಲೀಸರಿಗೆ ಕೆಲಸ ಹಗುರಗೊಳಿಸುವ ಸ್ಥಳ ಇದಾಗಿತ್ತು. ಯುವಕರ ವಾಲಿಬಾಲ್ ತಂಡ ಕಟ್ಟಿ ಆಡಿಸಿದ ಸುಬ್ರಹ್ಮಣ್ಯ ಶೆಟ್ಟರು, ತಮ್ಮ ಮನೆಯನ್ನೇ ಕೇಂದ್ರವಾಗಿಸಿ ಮಹಿಳಾ ಸಂಘ ಸ್ಥಾಪನೆಗೆ ಪ್ರೇರೇಪಿಸಿದವರು. ಡಾ.ರಾಜಕುಮಾರರನ್ನು ಕರೆಯಿಸಿ ಕಲಾಶ್ರೀ ರಂಗಮಂದಿರ ಉದ್ಘಾಟಿಸಿದ ಇವರು, ರಾಜಧಾನಿಯಲ್ಲಿ ಭಿಕ್ಷುಕರ ಸಮಾವೇಶ ಸಂಘಟಿಸಿ ಭಿಕ್ಷಾಟನೆ ತೊರೆದು ಸ್ವಉದ್ಯೋಗದಲ್ಲಿ ಹಲವರನ್ನು ತೊಡಗಿಸಿದ ಬಹುಮುಖಿ ಚಿಂತನೆಯ ಹೋರಾಟಗಾರ.

ಒಟ್ಟಾರೆ ಊರು ಎನಿಸಿಕೊಳ್ಳಲು ಇರಬೇಕಾದ ಎಲ್ಲ ಅವಶ್ಯಕತೆಗಳನ್ನು ಮನಗೊಂಡು ಸರ್ವಸ್ಪರ್ಶಿಯಾಗಿ ೪೦ರ ದಶಕದಲ್ಲೇ ಕಾರ್ಯಪ್ರವೃತ್ತರಾದ ಪರಿಣಾಮ ಕೆಲ ವರ್ಷಗಳ ಹಿಂದಷ್ಟೇ ಅಜ್ಜಂಪುರ ತಾಲ್ಲೂಕು ಕೇಂದ್ರದ ಗೌರವ ಪಡೆಯಿತು. ರಾಷ್ಟ್ರನಾಯಕರುಗಳೊಂದಿಗೆ ನಿಕಟ ಸಂಪರ್ಕ ಹೊಂದಿದರೂ ಸ್ವಾರ್ಥಕ್ಕೆ ಕಿಂಚಿತ್ತೂ ಬಳಸದೆ ಊರಿನ ಅಭಿವೃದ್ಧಿಗಾಗಿ ಧಾರೆಯೆರೆದ ಪುಣ್ಯಾತ್ಮ ಸುಬ್ರಹ್ಮಣ್ಯ ಶೆಟ್ಟರು ಮುಂದೆ ಎರಡು ದಶಕಗಳ ಕಾಲ ಅಜ್ಜಂಪುರ ಪುರಸಭಾ ಆಡಳಿತ ನಡೆಸಿದರು. ಅವರ ಭಾವಚಿತ್ರವನ್ನು ರಾಷ್ಟ್ರನಾಯಕ ಎಸ್.ನಿಜಲಿಂಗಪ್ಪ ಅವರ ಸಮ್ಮುಖದಲ್ಲೇ ಅನಾವರಣಗೊಳಿಸಿ ಗೌರವಿಸಿದ್ದು ಅವಿಸ್ಮರಣೀಯ.

"ಸುಬ್ರಹ್ಮಣ್ಯ ಶೆಟ್ಟರು ಒಬ್ಬ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಾಗಿ ಸಮುದಾಯದ ಸೇವೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡು ತತ್ತ್ವಜ್ಞಾನ, ಕಲೆ, ಸಾಹಿತ್ಯ ಕ್ಷೇತ್ರದಲ್ಲೂ ಅಪರೂಪದ ಕೊಡುಗೆಗಳನ್ನು ಇತ್ತು ಅರ್ಥಪೂರ್ಣವಾಗಿ ಬದುಕನ್ನು ನಡೆಸಿದವರು" ಎಂದು ಹೊತ್ತಿಗೆಯೊಂದರ ಬೆನ್ನುಡಿಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಬಣ್ಣಿಸಿರುವುದು ಅವರ ಕಾರ್ಯಕ್ಷಮತೆಯ ದ್ಯೋತಕ.

'ಒಂದು ಆಧುನಿಕ ಊರು ಕಟ್ಟಲು ಸ್ಕೂಲು, ರಸ್ತೆ, ನೀರು, ವಿದ್ಯುತ್ ದೀಪಗಳಂತೆ, ನಾಟಕ, ಸಂಗೀತಗಳು ಮುಖ್ಯ ಎಂಬ ಸತ್ಯವನ್ನು ಅರಿತಿದ್ದೇ ಸುಬ್ರಹ್ಮಣ್ಯ ಶೆಟ್ಟರನ್ನು ವಿಶಿಷ್ಟ ಗಾಂಧಿವಾದಿಯಾಗಿಸಿದೆ. ಎಡಗೈಯಲ್ಲಿ ಕೊಟ್ಟಿದ್ದನ್ನು ಬಲಗೈಗೆ ತಿಳಿಯದಂತೆ ಬಡವರಿಗೆ, ದಲಿತರಿಗೆ ನೆರವಾಗುತ್ತಾ ತಮ್ಮೂರ ತರುಣರಿಗೆ ಸ್ವಾತಂತ್ರ್ಯ ಹೋರಾಟದ ಪಾಠವನ್ನೂ, ಬದುಕಿನ ಪಾಠವನ್ನೂ ಕಲಿಸಿದರು. ಜಾತಿ, ಧರ್ಮಗಳ ಮುಖ ನೋಡದೆ ಎಲ್ಲ ಅಸಹಾಯಕರಿಗೂ ಸ್ಪಂದಿಸುತ್ತಿದ್ದ ಶೆಟ್ಟರು ಸಹಜ ಜಾತ್ಯತೀತ ವ್ಯಕ್ತಿಯಾಗಿದ್ದರು. ಶೆಟ್ಟರ ವ್ಯಕ್ತಿತ್ವದಲ್ಲಿ ಅವರ ಮುಗ್ಧತೆ, ಸರಳತೆ, ವ್ಯವಹಾರ ಜ್ಞಾನ, ನಾಡಿನ ಕೆಲಸಕ್ಕೆ ಸದಾ ಸಿದ್ಧರಿರಬೇಕೆಂಬ ಗಾಂಧಿಯುಗದ ಆದರ್ಶ– ಇವೆಲ್ಲ ಅನನ್ಯವಾಗಿ ಬೆರೆತಿದ್ದವು' ಎಂದು ಚಿಂತಕ ನಟರಾಜ್ ಹುಳಿಯಾರ್ ಉಲ್ಲೇಖಿಸಿರುವುದು ಗಮನಾರ್ಹ.

'ಅಜ್ಜಂಪುರ ಎಂದಕೂಡಲೇ ನಮಗೆ ನೆನಪಾಗುವುದು ಸುಬ್ರಹ್ಮಣ್ಯ ಶೆಟ್ಟರು. ಅವರು ಮಾಡಿರುವ ಕೆಲಸದ ಬಗ್ಗೆ ಕೇಳಿದರೆ ಆಶ್ಚರ್ಯವಾಗುತ್ತದೆ. ಅವರು ಯುವಕರನ್ನು ಕೆಲಸಕ್ಕೆ ಹಚ್ಚುತ್ತಿದ್ದ ಕ್ರಮ ನಮಗೆ ಮಾದರಿಯಾದದ್ದು. ಸುಬ್ರಹ್ಮಣ್ಯ ಶೆಟ್ಟರಂಥವರು ಒಂದು ತಾಲ್ಲೂಕಿಗೆ ಒಬ್ಬರು ಸಿಕ್ಕರೂ ಸಾಕು, ನಮ್ಮ ರಾಜಕಾರಣ ಸಲೀಸಾಗಿ ನಡೆಯುತ್ತದೆ' ಎಂದು ಪಿ.ಲಂಕೇಶ್ ಸಾರ್ವಜನಿಕ ಭಾಷಣದಲ್ಲಿ ಹೇಳಿದ್ದರು.

ಸುಬ್ರಹ್ಮಣ್ಯ ಶೆಟ್ಟರ ಭಾವಚಿತ್ರವನ್ನು ಅಜ್ಜಂಪುರದ ಸಾರ್ವಜನಿಕ ಸಂಸ್ಥೆಗಳಲ್ಲಷ್ಟೇ ಅಲ್ಲ ಹಲವು ಮನೆಗಳಲ್ಲಿ ಇಂದಿಗೂ ಕಾಣಬಹುದು. ನಡೆದಂತೆ ನುಡಿಯುವ ರಾಜಕಾರಣಿಗಳ ಸಾಲಿನಲ್ಲಿ ಅವರು ಮಿನುಗುತ್ತಾರೆ. ಲಾಲ್‌ಬಹದ್ದೂರ್ ಶಾಸ್ತ್ರಿ ನೆನಪಿಸುವ ಕುಳ್ಳನೆಯ ವ್ಯಕ್ತಿ ಅತಿ ಎತ್ತರಕ್ಕೆ ಏರಿದ ಪರಿ ಇಂದಿನ ಯುವಜನತೆಗೆ ನಿಜಕ್ಕೂ ಮಾದರಿ. ಯೋಧನೊಬ್ಬನ ಭಾಷಣಕ್ಕಿಂತ ಅವನು ತಂದ ಅಭಿವೃದ್ಧಿ, ಬದಲಾವಣೆಗಳು ಅಜ್ಜಂಪುರದಲ್ಲಿ ಇಂದೂ ಮಾತನಾಡುತ್ತಿವೆ.

ತಾಲ್ಲೂಕಿನ ಸ್ವಾತಂತ್ರ್ಯದ ಹೋರಾಟದ ನೆನಪುಗಳು ಹಿರಿಯರ ತ್ಯಾಗ, ಸಮಾಜಮುಖಿ ಚಿಂತನೆ, ಸಾಮರಸ್ಯದ ಪರಿಕಲ್ಪನೆ ಕಟ್ಟಿಕೊಡುತ್ತಿವೆ. ಸ್ವಾರ್ಥಕ್ಕಿಂತ ಸಮಾಜ, ದೇಶ ಮಿಗಿಲೆಂಬ ಸಮರ್ಪಣೆಯ ಭಾವಕ್ಕೆ ಹಳೆಯ ನೆನಪುಗಳು ಪ್ರೇರಣೆಯಾಗುತ್ತವೆ.

❑

## ಚಿಕ್ಕಮಗಳೂರು ಜಿಲ್ಲೆಯಲ್ಲಿ ತಾಮ್ರಪತ್ರ ಪಡೆದ ಸ್ವಾತಂತ್ರ್ಯಹೋರಾಟಗಾರರು

೧. ರಂಗಪ್ಪ
೨. ಅಣ್ಣಪ್ಪಶೆಟ್ಟಿ
೩. ಸಿ.ಎಂ.ಎಸ್.ಶಾಸ್ತ್ರಿ
೪. ಸಿ.ಆರ್.ಶಂಕರಪ್ಪ
೫. ಎ.ಬಿ.ಬಸವಾರಾಧ್ಯ
೬. ಸಿ.ನಿರ್ವಾಣಪ್ಪ
೭. ಎಂ.ಹುಚ್ಚೇಗೌಡ
೮. ಆಲ್ದೂರು ಬಸಪ್ಪಶೆಟ್ಟಿ
೯. ಯಳ್ಳಂಬಳಸೆ ಚಂದ್ರಶೇಖರಯ್ಯ
೧೦. ಹುಣಸಘಟ್ಟ ಮಲ್ಲಿಕಾರ್ಜುನಪ್ಪ
೧೧. ಡಾ.ಮಹಾಬಲಭಟ್ಟ
೧೨. ಕೆ.ಶಂಕರ್‌ರಾವ್
೧೩. ಕೆ.ನಾಗಭೂಷಣ್
೧೪. ಭಾಗಮನೆ ದೇವೇಗೌಡ
೧೫. ಮಲ್ಲಾಚಾರಿ
೧೬. ಕೆ.ಆರ್.ನಾರಾಯಣಶೆಟ್ಟಿ
೧೭. ಸಿ.ವಿ.ಧ್ರುವರಾವ್
೧೮. ಸಿ.ವಿ.ಬಾದರಾಯಣ

**ಈ ಮಹಾಸ್ವಾತಂತ್ರ್ಯ ರಣಯಾಗ ಧೂಮದಲ್ಲಿ**
**ಶ್ವೇತಾಗ್ನಿ ಜ್ವಾಲೆಯೊಂದುರಿಯುತಿದೆ; ನಿಶ್ಚಲಂ**
**ರಂಜಿಸುತ್ತಿದೆ–ಶಾಂತಿಯಲಿ ಹಿಮಮಹಾಚಲಂ**
**ರಾರಾಜಿಸುವಂತೆ ನೀಲಿಮ ನಭೋಧಾಮದಲ್ಲಿ**

**–ಕುವೆಂಪು**



### ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
### ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರ.ಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |

| | | | |
|---|---|---|---|
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |



| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |

| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬ | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬ | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |



| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |